ಶಾಸನ ರಚನೆ

ವಿಧೇಯಕವನ್ನು ಮಂಡಿಸುವುದು

(ಇ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2006

ಮಂಡನೆಗೆ ಅನುಮತಿ ಕೋರಿಕೆ

ಉಪಾಧ್ಯಕ್ಷರು: ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸುವುದು.

ಶ್ರೀ ಜಗದೀಶ್‌ಶೆಟ್ಟರ್: 'ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2006 ಅನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.'

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, "ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ 2006 ಅನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2006 ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಉಪಾಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಯಿತು. ಈಗ ಪರ್ಯಾಲೋಚನೆ ಪ್ರಸ್ತಾವ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2006 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಉಪಾಧ್ಯಕ್ಷರೇ, ಇದು ಬಹಳ ಸಣ್ಣ ವಿಷಯಗಳ ಬಗ್ಗೆ ಇರುವಂಥ ಒಂದು ಸಣ್ಣ ಮಸೂದೆ, ಏಕೆಂದರೆ ಬಗರ್ ಹುಕುಂ ಕಮಿಟಿಗಳ ಕಾರ್ಯಕಲಾಪಗಳನ್ನು ಮಾಡಲಿಕ್ಕೆ ಅವಧಿ ಮುಗಿದು ಹೋಗಿದೆ. ಇದನ್ನು ಕಾರ್ಯಕಲಾಪಗಳ ಅವಧಿ ವಿಸ್ತರಣೆಗಾಗಿ ಮಾತ್ರ ಮಂಡಿಸಲಾಗಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಎಲ್ಲಾ ಬಿಲ್ಲಿಗೂ ಇವತ್ತೇ ಅರ್ಜೆಂಟ್ ಏನಿತ್ತು? ಬರಗಾಲದ ಬಗ್ಗೆ ಚರ್ಚೆ ಪಕ್ಕಕ್ಕೆ ಹಾಕಿ ಇವತ್ತೇ ಎಲ್ಲಾ ಬಿಲ್ಲುಗಳನ್ನು ಮಂಡಿಸಬೇಕಾಗಿತ್ತೇ? This is your commitment.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈ ಬಿಲ್ ಕೇವಲ ಒಂದು ಅವಧಿ ವಿಸ್ತರಣೆ ಮಾಡಲಿಕ್ಕೆ ಅಷ್ಟೇ. ನೀವು ಹೇಳಿದ ಮಾತುಗಳನ್ನು ನಾವು ಫಾರ್ಮೆಟ್ ಮಾಡಿದ್ದೇವೆ. ಆದರೆ ಆ ರೀತಿಯಾಗಿ ಕಾರ್ಯಕಲಾಪಗಳು ನಡೆಯುತ್ತಿಲ್ಲ. ಹಾಗೆ ಕಾರ್ಯಕಲಾಪಗಳನ್ನು ನಡೆಸಲಿಕ್ಕೆ ಎರಡು ವರ್ಷ ಅವಧಿ ವಿಸ್ತರಣೆ ಮಾಡಲಿಕ್ಕಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

Sri K.R. RameshKumar: Whatever it is, ನೀವು ಹೇಳಿದ್ದೇನು? ಸಂಸದೀಯ ವ್ಯವಹಾರ ಸಚಿವರು ಈ ವಿಷಯವನ್ನು ಸ್ವಲ್ಪ ಗಮನಿಸಬೇಕು. ನಾವು ನಮ್ಮ ಡ್ಯೂಟಿಯನ್ನು ಮಾಡಿದೆವು, We had to demonstrate our will. We have done that. We have walked out. Parliamentary democracy ಯಲ್ಲಿ ನಮಗಿರುವಂಥ option ನೀವು ಅದನ್ನು ತೆಗೆದುಕೊಳ್ಳಬಹುದೆ? Is it fair? As the representative of the Government, you tell me. Was that the agreement? Is it fair? ಹಾಗಾದರೆ ಒಂದು ಕೆಲಸ ಮಾಡಿ, ಬರಗಾಲ ಇಲ್ಲ, ಎಲ್ಲಾ ಸುಭಿಕ್ಷವಾಗಿದೆಯೆಂದು ತೀರ್ಮಾನ ತೆಗೆದುಕೊಂಡು ಬಿಡಿ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಸನ್ಮಾನ್ಯ ಅಧ್ಯಕ್ಷರೆ, ಈ ಬಿಲ್ ಕೂಡ ಜನಪರವಾಗಿರುವಂಥ ಬಿಲ್; ಬಗರ್ ಹುಕುಂ ರೈತರಿಗೆ ನಾವು ಹಕ್ಕುಪತ್ರವನ್ನು ಕೊಡುವಂತಹದ್ದು, ಬಡವರಿಗೆ, ದಲಿತರಿಗೆ ಕೊಡುವಂಥದ್ದು ಇದು. ಮಾನ್ಯ ರಮೇಶ್‌ಕುಮಾರ್‌ರವರೇ, ಇದನ್ನು ಅರ್ಥ ಮಾಡಿಕೊಳ್ಳಲಿಲ್ಲ ಎಂದರೆ ಹೇಗೆ? ತಮ್ಮಂಥ ಹಿರಿಯರು ಹೀಗೆ ಮಾತನಾಡಿದರೆ ಹೇಗೆ? ಇದು ಬಹಳ important Bill ಇದರ ಅವಧಿ ಮುಗಿದು ಹೋಗಿದೆ. ನಾವೆಲ್ಲಾ ಆ ಕಮಿಟಿಯ ಅಧ್ಯಕ್ಷರಾಗಿ ಕೆಲಸ ಮಾಡಬೇಕಾಗಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಹೌದು, ನಾವು ಹಾಗೆ, ಆ ರೀತಿ ಆಲೋಚನೆ ಇದ್ದವರಾಗಿದ್ದರೆ ವಿಧಾನಸಭೆಯನ್ನು ಕರೆಯುವುದಕ್ಕೆ ಮೊದಲೇ ನಮ್ಮನ್ನೆಲ್ಲಾ ವಿಶ್ವಾಸಕ್ಕೆ ತೆಗೆದುಕೊಂಡು ಕರೆದು ಮಾಡಬೇಕಾಗಿತ್ತು.

ಶ್ರೀ ಆರಗ ಜ್ಞಾನೇಂದ್ರ: ಹೇಗೆ ಸರ್? ನೀವು ವಾಕ್‌ಔಟ್ ಮಾಡಿದಿರಿ, ಮತ್ತೆ ಬಂದು ಸದನದಲ್ಲಿ ಕುಳಿತುಕೊಂಡಿರಿ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವಂತಹ ವಿಧೇಯಕವಿದ್ದರೆ ನಮಗೇನೂ ತಕರಾರಿಲ್ಲ. ಚರ್ಚೆ ಮಾಡಲಿಕ್ಕೆ ಅಡ್ಡಿಯಿಲ್ಲ, ಆದರೆ ಇದು ಕೇವಲ ಅವಧಿಯನ್ನು ವಿಸ್ತರಣೆ ಮಾಡುವಂಥದ್ದು, ಈಗಾಗಲೇ ಬಗರ್ ಹುಕುಂ ಕಮಿಟಿಗಳು constitute ಆಗಿವೆ. ಅವುಗಳ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಲಿಕ್ಕೆ ಅವಧಿ ಮುಗಿದಿದೆ. ಹಾಗಾಗಿ ಎರಡು ವರ್ಷಗಳ ಕಾಲ ಅವಧಿಯನ್ನು ವಿಸ್ತರಿಸಲಿಕ್ಕೆ ಈ ಒಂದು ವಿಧೇಯಕವನ್ನು ನಾನು ಮಂಡಿಸುತ್ತಿದ್ದೇನೆ ಅಷ್ಟೇ. ಇಲ್ಲಿನ ಬಗರ್ ಹುಕುಂ ಕಮಿಟಿಗಳೆಲ್ಲಾ ಹಾಗೇ ಇವೆ.

ಶ್ರೀ ಹೆಚ್. ನಿಂಗಪ್ಪ: ಮಾನ್ಯ ಅಧ್ಯಕ್ಷರೆ, ಈಗ ಬಗರ್‌ಹುಕುಂ ಸಾಗುವಳಿ ಮಾಡಿರತಕ್ಕಂಥ ಸುಮಾರು ಜನ ರೈತರು ಫಾರಂ ನಂಬರ್ 50–53 ರಲ್ಲಿ ಅರ್ಜಿಯನ್ನು ಹಾಕಿದ್ದು ಬಹಳಷ್ಟು ಪೆಂಡಿಂಗ್ ಇವೆ, ಅವರಿಗೆಲ್ಲಾ ಮಂಜೂರಾತಿಯನ್ನು ಕೊಟ್ಟು ಹಕ್ಕುಪತ್ರ ಕೊಡಬೇಕು. ಪ್ರತಿಯೊಬ್ಬ ಶಾಸಕರಿಗೂ ಅನ್ವಯಿಸುವಂಥದ್ದು ಇದು.

ಶ್ರೀ ಜಗದೀಶ್ ಶೆಟ್ಟರ್: ಹಾಗಾಗಿ ದಯವಿಟ್ಟು ಈ ಬಿಲ್ಲನ್ನು ಅನುಮೋದಿಸಲಿಕ್ಕೆ ಅನುಮತಿಯನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈ ಬಿಲ್ಲನ್ನು ವಿರೋಧ ಮಾಡುವುದು ಪರವಾಗಿ ಮಾತನಾಡುವುದು ಬೇರೆ. ನಿಮ್ಮ ಉದ್ದೇಶವೇನೆಂಬುದು ನಮಗೆ ಅರ್ಥವಾಗುತ್ತಿಲ್ಲ. Business Advisory Committeeಯಲ್ಲಿ ಕುಳಿತಾಗಲೂ ಹೇಳಿದ್ದೇವೆ. ಆಮೇಲೆ ಹೇಳಿದ್ದೇವೆ. ನೀವು ನಾಳೆ ಬಿಟ್ಟು Ordinance ಮಾಡಿಕೊಳ್ಳಬೇಕಾಗಿತ್ತು. What prevented you from going in for the Ordinance? ನೀವು ನಮಗೆ ಬಹಳ ರಕ್ಷಣೆ ಕೊಡುವವರಾಗಿದ್ದರೆ Oridnance pass ಮಾಡಬಹುದಾಗಿತ್ತು. ನಾನು ಕೇಳುತ್ತಿದ್ದೇನೆ. ನಾಳೆ ಒಂದು ದಿವಸ ಬಿಟ್ಟು ನಾಳಿದ್ದು Ordinance ಮಾಡಿದ್ದರೆ minister ಗೆ ಏನಾಗುತ್ತಿತ್ತು? ಏತಕ್ಕೆ ನೀವು ಈ ಸಭೆಯಲ್ಲಿ ನೀವು ಬೇರೆ ವಿಷಯಗಳಿಗೆ ಚರ್ಚೆ ಮಾಡಲಿಕ್ಕೆ ಅವಕಾಶಗಳನ್ನು ಕುಂಠಿತ ಮಾಡುತ್ತಿದ್ದೀರಿ. ತಮ್ಮ ಉದ್ದೇಶ, ಬಗರ್ ಹುಕುಂ ಕಮಿಟಿಯ ಅಧ್ಯಕ್ಷರನ್ನು, ಸದಸ್ಯರನ್ನು ಮುಂದುವರೆಸಬೇಕೆಂದು ಇದ್ದಿದ್ದರೆ Ordinance pass ಮಾಡಲಿಕ್ಕೆ prevent ಮಾಡಿದವರು ಯಾರು? ಅದನ್ನು ಫಸ್ಟ್ ಹೇಳಬೇಕು. ನೀವು ಏತಕ್ಕೆ ಎಲ್ಲಾ ಬಿಲ್ಲುಗಳನ್ನು ಇಲ್ಲೇ introduce ಮಾಡಿ ಬೆಳಗಾಂನಲ್ಲಿ ಕುಳಿತುಕೊಂಡು ರಾತ್ರಿಯೆಲ್ಲಾ ಬಿಲ್ಲುಗಳ ಮೇಲೆ ಬಾಣವನ್ನು ಬಿಟ್ಟುಕೊಂಡು ಇಂತಹದ್ದರ ಮೇಲೆ ಚರ್ಚೆ ಮಾಡುವುದು, ಯಾರೋ ನಿಂತುಕೊಳ್ಳುವುದು, ಮುಂದಿನ ಬೆಂಚ್‌ನವರಿಗೆ

ಮಾತನಾಡಲಿಕ್ಕೆ ಅವಕಾಶವನ್ನು ಕೊಡುತ್ತೀರಿ ಎಂದು ಹೇಳುವುದು; ನಾವು ಬೆಳಿಗ್ಗೆಯಿಂದ ಬಾಯಿ ಮುಚ್ಚಿಕೊಂಡು ಕುಳಿತ್ತಿದ್ದೇವೆ. ನಿಮ್ಮ ಬರ, ನೆರೆ ಮೇಲಾಗಲಿ ಶಾಸಕರು ಮಾತನಾಡಲಿಕ್ಕೆ ಇಚ್ಚೆ ಪಟ್ಟಿದ್ದಾರೆಂದು ನಾವು ಸುಮ್ಮನಿದ್ದೇವೆ. ಒಂದಾದ ಮೇಲೊಂದು ಬಿಲ್ಲುಗಳನ್ನು ತಂದು ಈ ಅಧಿವೇಶನದ ಘನತೆಯನ್ನು..

ಶ್ರೀ ಜಗದೀಶ್ ಶೆಟ್ಟರ್: ಒಂದಾದ ಮೇಲೊಂದು ಬಿಲ್‌ಗಳನ್ನು ತಂದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: (ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾಧುಸ್ವಾಮಿಗಳೆ, Ordinance ಅನ್ನು ಮಾಡಿತ್ತು. ಅಧ್ಯಾಧ್ಯಪನಯನ್ನು ಮಾಡಿತ್ತು. ಮಾನ್ಯ ರಾಜ್ಯಪಾಲರು ಹೇಗೂ ಅಧಿವೇಶನವನ್ನು ಕರೆಯುತ್ತಿದ್ದೀರಿ, ಅಲ್ಲಿ ಮಾಡಿ ಎಂದು ಕಳುಹಿಸಿದ ಸೂಚನೆಗಾಗಿ ಅವರು ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್, ರಾಜ್ಯಪಾಲರು ನಿಮ್ಮ Ordinance ಅನ್ನು ಹಿಂದಕ್ಕೆ ಹಾಕಲಿಕ್ಕೆ ಸಾಧ್ಯವೇ ಇಲ್ಲ. ನೀವು ಅಸೆಂಬ್ಲಿ ಸಮನ್ಸ್ ಮಾಡಿದ ಮೇಲಾದರೂ ನೀವು ಮಾಡಿದ್ದರೆ ನೀವು ಜವಾಬ್ದಾರರಾಗುತ್ತಿದ್ದಿರಿ.

Sri Jagadish Shettar: Ordinance ಗೆ ಕಳುಹಿಸಿದ್ದೆವು, ಈ ಅಧಿವೇಶನ ದಿನಾಂಕವನ್ನು ನಿಗದಿ ಆದಮೇಲೆ ಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಲಾ ಮಿನಿಸ್ಟರ್‌ರವರು ನಾಳೆ ಬಿಟ್ಟು ನಾಳಿದ್ದೊಂದು Ordinance ಮಾಡಿಕೊಳ್ಳಲಿಕ್ಕಾಗುತ್ತಿರಲಿಲ್ಲವೇ?

ಶ್ರೀ ಜಗದೀಶ್ ಶೆಟ್ಟರ್: ನಾವು ಆ ಪ್ರಯತ್ನವನ್ನೂ ಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಟೈಮ್ ಬಹಳ ಪ್ರಿಷಿಯಸ್, ಈ ಶಾಸನಸಭೆಯನ್ನು ನಾಳೆ ನೀವು ಇಲ್ಲಿ ಮುಗಿಸಬೇಕಾಗಿದೆ. ಬಹಳ ಜನಕ್ಕೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕಾಗಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ರೆವಿನ್ಯೂ ಮಿನಿಸ್ಟರ್‌ರವರು ಹೇಳ ತಕ್ಕಂಥಾದ್ದು that will go to records. It will send a very wrong message. ಒಂದು ಸರ್ಕಾರ ಒಂದು Ordinance ಅನ್ನು ಗವರ್ನರ್ ಹತ್ತಿರ ಕಳುಹಿಸಿದರೆ, how can the Governor refuse? ನೀವು ನೋಟಿಫಿಕೇಷನ್ issue, ಮಾಡಿದ ಮೇಲೆ ಕಳುಹಿಸಿದರೆ, yes, ಹೇಗೂ Assembly meet ಆಗುತ್ತಿದೆ, ಅಲ್ಲಿಗೆ ಹೋಗಿ ಎಂದು ಹೇಳುತ್ತಾರೆ. You can't go on record, ವಾಪಸ್ಸು ಕಳುಹಿಸಿದರು ಎಂದು ಹೇಳಿ. That will reflect. ಸರಿಹೋಗುವುದಿಲ್ಲ; ನೀವು ಅದನ್ನೆಲ್ಲಾ ಮಾತನಾಡುತ್ತೀರಿ. ನೀವು ಆಲೋಚನೆ ಮಾಡಿ ಅದರ ಪರಿಣಾಮ ಏನಾಗುತ್ತದೆ? Governor,

constitutionally is duty-bound to honour the Ordinance. He has no authority.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈ ಮಸೂದೆ ಈ ಸದನದ ಎಲ್ಲಾ ಸದಸ್ಯರಿಗೂ ಅನ್ವಯವಾಗಿ ಎಲ್ಲಾ ಸದಸ್ಯರು ಒಕ್ಕೊರಲಿನಿಂದ ಇದನ್ನು ಸ್ವೀಕರಿಸಬೇಕಾದಂಥ ಮಸೂದೆಯಾಗಿದೆ. ಅಲ್ಲಿ ಸಾವಿರಾರು ಜನ ಅರ್ಜಿಯನ್ನು ಹಾಕಿಕೊಂಡು ಮಂಜೂರಾತಿಗಾಗಿ ಕಾಯುತ್ತಿದ್ದಾರೆ. ನಾವು ಈ ತಾಂತ್ರಿಕತೆಯನ್ನು ಮುಂದಿಟ್ಟು ಈ ಮಸೂದೆಯನ್ನು ಪಾಸ್ ಮಾಡಲಿಕ್ಕೆ ಅಡ್ಡಿಪಡಿಸಿದರೆ ನಿಜವಾಗಿಯೂ ಅಲ್ಲಿನ ಬಡಜನರಿಗೆ ಇನ್ನಷ್ಟು ಅನಾನುಕೂಲ ವಾಗುತ್ತದೆ. ಈ ಮಸೂದೆ ಎಲ್ಲರಿಗೂ ಬೇಕಾಗಿದೆ, ಇದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ.

ಶ್ರೀ ಎಂ.ಪಿ. ವೆಂಕಟೇಶ್: ಮಾನ್ಯ ಅಧ್ಯಕ್ಷರೆ, ನೀವು ಈಗಾಗಲೇ ಬಿಲ್ಲನ್ನು ಮಂಡನೆ ಮಾಡಿದ್ದೀರಿ.

(ಅಡಚಣೆ)

ಶ್ರೀ ಆಲಂಗೂರು ಶ್ರೀನಿವಾಸ್: ಮಾನ್ಯ ಅಧ್ಯಕ್ಷರೆ, ಇವತ್ತು ಬಹಳ ಜನ ಬಡವರೆಲ್ಲಾ ನಿರ್ಗತಿಕರಾಗಿರುವಂಥಾದ್ದು, ಇವತ್ತು ತಾಲ್ಲೂಕಿನಲ್ಲಿರುವ ಅನೇಕ ಬಡಜನರ ಅರ್ಜಿಗಳು ಪೆಂಡಿಂಗ್ ಇವೆ. ಮಾನ್ಯ ರಮೇಶ್‌ಕುಮಾರ್‌ರವರೇ, ತಮ್ಮ ತಾಲ್ಲೂಕಿನಲ್ಲಿಯೂ ಇದೆ, ಬಹಳಷ್ಟು ಜನ ಬಡವರಿಗೆ ಇನ್ನೂ ಅವಕಾಶ ಸಿಕ್ಕಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀನಿವಾಸ್‌ರವರು ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದ ಮಂತ್ರಿಮಂಡಲದಿಂದ ಮೊದಲುಗೊಂಡು ಈ ಅಸೆಂಬ್ಲಿ ರಚನೆಯಾದಾಗಿನಿಂದ ಇವತ್ತಿನವರೆಗೂ ಈ ಸಮಿತಿಗಳ ಒಂದು ಸಭೆಯೂ ನಡೆಯಲಿಲ್ಲ. ನೀವೇ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾಗ ಆ ಇಪ್ಪತ್ತು ತಿಂಗಳೂ ಒಂದು ಸಭೆಯನ್ನು ನಡೆಸಿಲ್ಲ. ಏತಕ್ಕೆ ಬಡವರ ಮೇಲೆ ರಾತ್ರೋರಾತ್ರಿ ಇಷ್ಟು ಪ್ರೀತಿ ಬಂದಿದೆ? ನಾವು ಬಿಲ್ಲಿನ merits, demerits ಬಗ್ಗೆ ಮಾತನಾಡಲಿಕ್ಕೆ ಹೋಗಲಿಲ್ಲ. ನೀವು ಕೊಟ್ಟ ಮಾತೇನು? ನೀವು ಹೇಳಿದಂತೆ ಎಕ್ಸೈಸ್ ಬಿಲ್ ಆಯಿತು. ಆ Office of Profit Bill ಸ್ವಲ್ಪ ಹೊತ್ತು ಚರ್ಚೆ ಮಾಡಿದೆವು. ವಿರೋಧ ಪಕ್ಷದವರಾಗಿ ವಿರೋಧವನ್ನು ವ್ಯಕ್ತಪಡಿಸುವುದು ನಮ್ಮ ಕರ್ತವ್ಯವಾಗಿತ್ತು. ವಿರೋಧ ವ್ಯಕ್ತಪಡಿಸಿ ನಾವು ಹೊರಗೆ ಹೋದೆವು. ಆದಾದ ಮೇಲೆ ಚರ್ಚೆ ಮುಂದುವರೆಯಬೇಕೆಂದು ಒಪ್ಪಿಕೊಂಡು ಒಂದಾದ ಮೇಲೊಂದು

ಬಿಲ್ಲುಗಳನ್ನು ತಂದರೆ ಹೇಗೆ? ಇಲ್ಲದೇ ಹೋದರೆ ನೀವು ಬಡವರ ಪರ, ನಾವು ಬಡವರ ವಿರೋಧ.

ಶ್ರೀ ಆರಗ ಜ್ಞಾನೇಂದ್ರ: ಸರ್ ಈ ಬಿಲ್ ಅಜೆಂಡಾದಲ್ಲಿ ನಿನ್ನೆಯಿಂದ ಇದೆ.

ಶ್ರೀ ಎಂ.ಪಿ. ವೆಂಕಟೇಶ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಿಲ್ ಮಂಡನೆಯಾಗಿದೆ. ಅವರು ಹೊರಗಡೆಯಿದ್ದರೂ ನಮ್ಮದೇನೂ ತಪ್ಪಿಲ್ಲ, ದಯವಿಟ್ಟು ಬಿಲ್ ಮಂಡನೆ ಮಾಡಲಿಕ್ಕೆ ಕೋರುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ: ಸರ್, ಮೊನ್ನೆಯಿಂದ ಅಜೆಂಡಾದಲ್ಲಿ ಈ ಸಬ್ಜೆಕ್ಟ್ ಬಂದಿದೆ, ದಯವಿಟ್ಟು ಮಾನ್ಯ ರಮೇಶ್ ಕುಮಾರ್, ಮಾಧುಸ್ವಾಮಿಯವರನ್ನು ಹೊರಗೆ ಕೂರಿಸಿ ಯಾವುದೋ ಒಂದು ಲಾಭದ ಬಿಲ್‌ಗಳನ್ನು ಹಾಕಿಕೊಂಡು ಹೋಗುವುದಾದರೆ, ಅವರು ಹೇಳುವುದು ಸರಿ ಸರ್, ಇದು ಮಾನ್ಯ ರಮೇಶ್ ಕುಮಾರ್‌ರವರೇ ಹೇಳಿದ ಹಾಗೆಯೇ ಮಾನ್ಯ ಧರಂಸಿಂಗ್‌ರವರ ಸರ್ಕಾರ ಬಂದಾಗಲಿನಿಂದ ಕೂಡ ಒಂದು ಮೀಟಿಂಗ್ ಆಗಿಲ್ಲ; ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ಅರ್ಜಿಗಳು ಕರ್ನಾಟಕ ರಾಜ್ಯದಲ್ಲಿ ಪೆಂಡಿಂಗ್ ಇವೆ, ನನ್ನ ಕ್ಷೇತ್ರದಲ್ಲಿಯೇ ಹತ್ತೂವರೆ ಸಾವಿರ ಅರ್ಜಿಗಳು ಪೆಂಡಿಂಗ್ ಇವೆ. ನಿಮಗೆ ಗೊತ್ತಿರುವ ಹಾಗೆ ನಾವೆಲ್ಲಾ ಶಾಸಕರೂ ಒಂದೊಂದು ಬಗರ್ ಹುಕುಂ ಕಮಿಟಿಯ ಅಧ್ಯಕ್ಷರಾಗಿ ಕೆಲಸ ಮಾಡಬೇಕಾಗಿದೆ. ಎಲ್ಲಾ ಪಕ್ಷದ ಶಾಸಕರುಗಳಿಗೂ ಜನರು ನೀವೆಲ್ಲಾ ಶಾಸಕರಾಗಿದ್ದೀರಿ ಒಂದು ಹಕ್ಕುಪತ್ರ ಕೊಡಿಸಲಿಕ್ಕೆ ಆಗಲಿಲ್ಲವೆಂದು ಮಧ್ಯ ರಸ್ತೆಯಲ್ಲಿ ನಿಲ್ಲಿಸಿಕೊಂಡು ಕೇಳುತ್ತಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಈ ಬಿಲ್ಲಿಗೆ 94(ಬಿ)ಗೆ ಅವಧಿ ಮುಗಿದು ಹೋಗಿದೆ. ಆ ಅವಧಿಯನ್ನು ವಿಸ್ತರಣೆ ಮಾಡುವುದಷ್ಟೇ ಬಿಟ್ಟರೆ ಬೇರೇನಿಲ್ಲ. ನೀವು ಆಗಿನಿಂದ ಕಾಕಂಬಿ ಬಗ್ಗೆ ಚರ್ಚೆ ಮಾಡಿದಿರಿ ಅದಕ್ಕೆ ನಾವೇನಾದರೂ ಹೇಳಿದೆವೇ? ಆ ಬಿಲ್ ಮೇಲೆ ಸಮಗ್ರವಾಗಿ ಚರ್ಚೆಯಾಗಬೇಕೆಂದು ನಾವೆಲ್ಲರೂ ಕೂಡ ಸಹಕಾರ ಮಾಡಿದ್ದೇವೆ. ತಾವು ಅದರ ಮೇಲೆ ಬೆಳಕು ಚೆಲ್ಲಿದ್ದೀರಿ. ಆದ್ದರಿಂದ ಇವತ್ತು ನಿಮ್ಮವರೇ ಬೀದಿ ಮೇಲೆ ಚಳವಳಿ ಮಾಡುತ್ತಿದ್ದಾರೆ. ಈ ಸರ್ಕಾರ ಬಂದಾಗಿನಿಂದ ಬಗರ್ ಹುಕುಂ ಸಾಗುವಳಿ ಕಮಿಟಿಗಳು ಆಗಲಿಲ್ಲ. ಒಂದು ಸಾಗುವಳಿ ಚೀಟಿಯನ್ನೂ ಕೊಡಲಿಲ್ಲ. ಇವತ್ತು ಕಾಂಗ್ರೆಸ್ಸಿನವರಿಗೆ ಇದೊಂದು ಇಷ್ಯೂ ಆಗಬಾರದಲ್ಲವೇ? ಇಲ್ಲಿ ನಾವು ಡಿಲೇ ಮಾಡಿದಷ್ಟೂ ಕೂಡ ಬಡವರಿಗೆ ಅನ್ಯಾಯವಾಗುತ್ತದೆ. ಇದೊಂದನ್ನು ತಿದ್ದುಪಡಿ ಮಾಡಲಿಕ್ಕೆ ಅವಧಿಯನ್ನು ವಿಸ್ತರಣೆ ಮುಂದುವರಿಸುವುದಕ್ಕೆ ಒಂದು ಬಿಲ್ಲನ್ನು ಪಾಸ್ ಮಾಡಬೇಕೆಂದು ಹೇಳಿ ನಾನೇ ಆ ಕಡೆ ಕೂಡ ಬಂದು ತಾವು ಸಹಕಾರ

ನೀಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಆದ್ದರಿಂದ ದಯವಿಟ್ಟು ಇದರಲ್ಲಿ ತಾವೆಲ್ಲಾ ಸಹಕರಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಈ ಬಿಲ್ introduce ಮಾಡಲಿಕ್ಕೆ ತಮಗಿದ್ದ ವಿಲ್ ಪವರ್ ಕಮಿಟಿ ಮಾಡಲಿಕ್ಕೆ ತಮಗಿರಲಿಲ್ಲವಲ್ಲಾ. Since two years ತಾವು ಯಾವ ತಾಲ್ಲೂಕುಗಳಲ್ಲಿಯೂ ಬಗರ್‌ಹುಕುಂ ಕಮಿಟಿಗಳನ್ನೇ ಮಾಡಿರಲಿಲ್ಲ. ಇವತ್ತೂ ಕೂಡ ಏನೊಂದು ಐವತ್ತು ಅರವತ್ತು ತಾಲ್ಲೂಕುಗಳಲ್ಲಿ ಬಗರ್ ಹುಕುಂ ಕಮಿಟಿಗಳಾಗಿವೆ. ಏತಕ್ಕೆ ಸುಮ್ಮನೆ ಮೊಸಳೆ ಕಣ್ಣೀರು ಸುರಿಸುತ್ತೀರಿ ಎಂಬುದು ನಮಗೆ ಅರ್ಥವಾಗಬೇಕಲ್ಲಾ, ನೀವು ರೆವಿನ್ಯೂ ಮಿನಿಸ್ಟರ್ ಹೇಳಬೇಕು, ಎಷ್ಟು ತಾಲ್ಲೂಕುಗಳಲ್ಲಿ ಬಗರ್ ಹುಕುಂ ಕಮಿಟಿಗಳನ್ನು constitute ಮಾಡಿದ್ದೀರಿ? ಮಾಡದಿದ್ದರೆ ಏಕೆ ಮಾಡಲಿಲ್ಲ, ಇದು ಬಡವರ ಬಗ್ಗೆ ಪ್ರೀತಿ, ಅಭಿಮಾನ ಇದ್ದಿದ್ದರೆ, …….. ಒಂದು ನಿಮಿಷ ನನ್ನ ಮಾತನ್ನು ಮುಗಿಸುತ್ತೇನೆ. ಎಷ್ಟು ತಾಲ್ಲೂಕುಗಳಲ್ಲಿ ಬಗರ್‌ಹುಕುಂ ಕಮಿಟಿಗಳು ಆಗಿವೆ?

9.00 PM

ಎಷ್ಟು ದಿವಸಗಳಿಂದ ಆಗಿದೆ ಎಂಬುದನ್ನು ಈ ಸಭೆಗೆ ಹೇಳಿ. ನಿಜವಾಗಿಯೂ ಬಡವರ, ರೈತರ ಜಮೀನನ್ನು ಅವರುಗಳಿಗೆ ಮಂಜೂರು ಮಾಡಬೇಕೆಂದು ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು ಏನು concern ತೋರಿಸಿದರು, ಆ concern ಈ ಸರ್ಕಾರಕ್ಕೆ ಇದ್ದಿದ್ದರೆ, ಬಗರ್‌ಹುಕುಂ ಕಮಿಟಿಯನ್ನು ಏಕೆ ರಚನೆ ಮಾಡಲಿಲ್ಲ?

ಶ್ರೀ ಆಲಂಗೂರು ಶ್ರೀನಿವಾಸ್: ನೀವು ಹೇಳುತ್ತಿರುವುದು ಕರೆಕ್ಟ್ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಮಾಧುಸ್ವಾಮಿಯವರೆ, ಇಲ್ಲಿಯವರೆಗೆ ಆಗಿರಲಿಲ್ಲ. ಆದರೆ, ಒಂದು ನೂರಕ್ಕೂ ಹೆಚ್ಚು ಕಮಿಟಿಗಳು ರಚನೆಯಾಗಿವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಒಂದು ನಿಮಿಷ ಸರ್. ಎಷ್ಟು ದಿವಸಗಳಿಂದ ಆಗಿವೆ ಎಂಬುದನ್ನು ಹೇಳಬೇಕಲ್ಲಾ.

ಶ್ರೀ ಜಗದೀಶ್ ಶೆಟ್ಟರ್: ಕಳೆದ ಒಂದು ತಿಂಗಳಿನಲ್ಲಿ ಹೆಚ್ಚು ಕಡಿಮೆ ಎಲ್ಲಾ ಕಡೆಗಳಲ್ಲೂ ಕಮಿಟಿಗಳು ಕಾನ್‌ಸ್ಟಿಟ್ಯೂಟ್ ಆಗಿವೆ. ನಿಮಗೆ ಲೆಕ್ಕ ತೋರಿಸುತ್ತೇನೆ. ನೀವ್ಯಾಕೆ ಹೀಗೆ ಮಾಡುತ್ತೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗ ನೀವು ರೈತರನ್ನು ದೃಷ್ಟಿಯಲ್ಲಿರಿಸಿಕೊಂಡು ಮಾತನಾಡುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್: ಮಾನ್ಯ ಸಚಿವರು ಜವಾಬ್ದಾರಿಯುತವಾಗಿ ಉತ್ತರ ಕೊಡುತ್ತಿದ್ದಾರೆ. ಅದು ಸರಿಯಿಲ್ಲವೆಂದು ತಮಗೆ ಕಂಡುಬಂದರೆ, ಅವರ

ಮೇಲೆ ತಾವು ಹಕ್ಕುಚ್ಯುತಿ ಪ್ರಸ್ತಾವ ತೆಗೆದುಕೊಂಡು ಬನ್ನಿ. ನೂರಕ್ಕೂ ಹೆಚ್ಚು ಕಮಿಟಿಗಳನ್ನು ರಚಿಸಲಾಗಿದೆ ಎಂದು ಸಚಿವರು ಜವಾಬ್ದಾರಿಯುತವಾಗಿ ಹೇಳಿದ ಮೇಲೆ ಅದನ್ನು ಅವರು ಒಪ್ಪಿಕೊಳ್ಳುವಂತಹ ಸೌಜನ್ಯತೆ ತೋರಿಸಬೇಕು. ಇಲ್ಲವೆಂದು ಕೈ ಅಲ್ಲಾಡಿಸಿದರೆ….

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಮಾಧುಸ್ವಾಮಿಯವರೆ, ನಾನು ಪುನಃ ಹೇಳುತ್ತಿದ್ದೇನೆ. ನೂರಕ್ಕೂ ಹೆಚ್ಚು ಕಮಿಟಿಗಳನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇನೆ. Already more than 100 Committees were constituted. Constitute ಮಾಡಿದ್ದೇವೆ, ಕಳೆದ ಒಂದು ತಿಂಗಳಿನಲ್ಲಿ ನೂರಕ್ಕೂ ಹೆಚ್ಚು ಕಮಿಟಿಗಳು constitute ಆಗಿವೆ. ಈ ರೀತಿ ಕಮಿಟಿ ರಚನೆಯಾಗಿಲ್ಲ ಎನ್ನುವಂಥಾದ್ದು ಸರಿಯಲ್ಲ. ಹಿಂದೆ ಆಗಿರಲಿಲ್ಲ. ಆದರೆ, ಈಗ ನಾವು ಕಮಿಟಿಗಳನ್ನು ರಚನೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಕೆಲವು ತಾಲ್ಲೂಕುಗಳು ಹಾಗೂ ಕೆಲವು ಜಾಗಗಳನ್ನು ಬಿಟ್ಟಿರುವುದಾದರೂ ಏಕೆ? ನೀವೇಕೆ ಕಮಿಟಿಗಳನ್ನು ರಚನೆ ಮಾಡಲಿಲ್ಲ? ನಿಮ್ಮ ಉದ್ದೇಶವಾದರೂ ಏನು? ಏನು ರಾಜಕೀಯ ನಿಮ್ಮದು? ಯಾವ ರಾಜಕೀಯಕ್ಕೋಸ್ಕರ ನೀವು ಮಾಡಲಿಲ್ಲ? ದಯವಿಟ್ಟು ಹೇಳಬೇಕು.

ಶ್ರೀ ಆರಗ ಜ್ಞಾನೇಂದ್ರ: ಈಗ ಅಮೆಂಡ್‌ಮೆಂಟ್ ತರುತ್ತಿದ್ದು, ಆದಾದ ನಂತರ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಸಮಿತಿಗಳನ್ನು ನೀವು ಏಕೆ ರಚನೆ ಮಾಡಲಿಲ್ಲ?

ಶ್ರೀ ಜಗದೀಶ್ ಶೆಟ್ಟರ್: ಹಿಂದೆ ಎರಡು ವರ್ಷಗಳಿಂದ ಕಮಿಟಿಗಳನ್ನು ರಚನೆ ಮಾಡಿರಲಿಲ್ಲ. ಈಗ ಕಮಿಟಿಗಳನ್ನು ರಚನೆ ಮಾಡಿದ್ದೇವೆ. ಈಗ ನಾಲ್ಕು ಲಕ್ಷ ಅರ್ಜಿಗಳು ಪೆಂಡಿಂಗ್ ಇವೆ.

ಶ್ರೀ ಆಲಂಗೂರು ಶ್ರೀನಿವಾಸ್: ಒಂದು ತಿಂಗಳೊಳಗಾಗಿ ಮಾಡುತ್ತಾರೆ. ದಯವಿಟ್ಟು ಸಹಕಾರ ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಕಮಿಟಿಗಳನ್ನು ಮಾಡುವುದಕ್ಕೆ concern ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಮಾಧುಸ್ವಾಮಿಯವರೆ, ನನಗೆ ಏನು ಒಂದು ಅರ್ಥವಾಗುತ್ತಿಲ್ಲವೆಂದರೆ, ಕಳೆದ ಮೂರು ದಿವಸಗಳಿಂದಲೂ ಸುದೀರ್ಘವಾಗ ಚರ್ಚೆಯಾಗುತ್ತಿದೆ. ರಾತ್ರಿ 11–12 ಗಂಟೆವರೆಗೂ ಕುಳಿತುಕೊಳ್ಳುತ್ತಿದ್ದೇವೆ. ಯಾವುದನ್ನೂ ಕಣ್ಣಾಮುಚ್ಚಾಲೆ ಮಾಡಿ, ನಿಮಗೆ ಗೊತ್ತಿಲ್ಲದಂತೆ ಮುಚ್ಚುಮರೆ ಮಾಡಿ ಪಾಸ್ ಮಾಡಿಕೊಂಡು ಹೋಗುವಂತಹ ಯಾವುದೇ ಇರಾದೆಯೂ ನಮಗಿಲ್ಲ. ಮಾನ್ಯ ಜಗದೀಶ್

ಶೆಟ್ಟರ್‌ರವರು ಏನು ಹೇಳುತ್ತಿದ್ದಾರೆಂದರೆ, ತಾವು ವಾಕ್‌ಔಟ್ ಮಾಡಿ ಹೊರಗಡೆ ಹೋಗಿದ್ದ ಸಂದರ್ಭದಲ್ಲಿ Office of Profit Bill ಪಾಸ್ ಮಾಡಿದೆವು. ಅದಾದ ನಂತರ ತಾವು ಬರುತ್ತೀರೋ ಇಲ್ಲವೋ ಎಂದುಕೊಂಡು ಇನ್ನೊಂದು ಬಿಲ್ಲನ್ನೂ ಮಾಡಿದ್ದೇವೆ. ಆ ಬಿಲ್‌ನಲ್ಲಿ ಏನಿದೆ ಎಂಬುದು ಬಹಳ ಮುಖ್ಯವಾಗಿರುವಂತಾದ್ದು, ನಮ್ಮೆಲ್ಲಾ ಶಾಸಕರುಗಳಿಗೂ ಆ ಸಮಿತಿಯಲ್ಲಿ ಕೆಲಸ ಮಾಡಲು ಅನುಕೂಲವಾಗುವಂತೆ ಅವಧಿಯನ್ನು ವಿಸ್ತರಣೆ ಮಾಡುವಂತಾದ್ದು, ಹೊಸದಾಗಿ ಯಾವುದನ್ನೂ ಇಂಟ್ರಡ್ಯೂಸ್ ಮಾಡುವಂತಾದ್ದೇನೂ ಇಲ್ಲ. ಅದನ್ನು ಕೆಲವೇ ನಿಮಿಷಗಳಲ್ಲಿ ಮಾಡಿಕೊಟ್ಟು ಚರ್ಚೆ ಮುಂದುವರೆಸುವುದಕ್ಕೆ ಏನು ತೊಂದರೆ ಇದೆ? ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಬಿಲ್ ಪಾಸ್ ಮಾಡಿಕೊಟ್ಟು 15 ನಿಮಿಷಗಳಲ್ಲಿ ಊಟ ಮಾಡಿಕೊಂಡು ಬಂದು ರಾತ್ರಿ ಒಂದು ಗಂಟೆವರೆಗೂ ಕುಳಿತುಕೊಂಡು ಚರ್ಚಿಸೋಣ. ಇದು ಐತಿಹಾಸಿಕ ಅಧಿವೇಶನ, ಇಲ್ಲಿ ಮಾಡೋಣ. ಲೋಕಸಭೆಯಲ್ಲಿ ಅನೇಕ ಸಲ ಬೆಳಗಿನ ಜಾವ 3–4 ಗಂಟೆವರೆಗೂ ಚರ್ಚೆಯಾಗಿದೆ. ಚರ್ಚೆ ಮಾಡೋಣ, ಬೇಡವೆಂದು ಹೇಳುತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಮಗೇ ಕೇಳಿಕೊಂಡವು. Supplementary Demands ಅನ್ನು ಬೆಂಗಳೂರಿನಲ್ಲಿ ಪಾಸ್ ಮಾಡಿದರೆ ಏನೂ ಆಗುವುದಿಲ್ಲ. ಇಂಟ್ರಡ್ಯೂಸ್ ಆಗುವುದು ಬೇಡ, ಅದಕ್ಕಿಂತಲೇ ಒಂದು ದಿವಸ ಕಳೆದುಹೋಗುತ್ತದೆಂದು ಹೇಳಿದೆವು, ಸಣ್ಣಪುಟ್ಟ ಬಿಲ್‌ಗಳನ್ನು ಪಾಸ್ ಮಾಡುತ್ತೇವೆಂದು Business Advisory Committee ಯಲ್ಲಿ ನೀವು ಹೇಳಿದಿರಿ. ನೀವೇನೂ ಅಜೆಂಡಾ ತರಲಿಲ್ಲ. ಬರಗಾಲದ್ದು, ನೆರೆ ಹಾಗೂ ನಂಜುಂಡಪ್ಪನವರ ವರದಿಗೆ ಸಂಬಂಧಿಸಿದಂತೆ ತಂದವರು ಯಾರೋ. ತಾವು ಅವೊತ್ತು ಒಪ್ಪಿಕೊಂಡಿರಿ, ನಾವು ಯಾವುದೇ major bills ಇಡುವುದಿಲ್ಲ. ಈ ಬಿಸಿನೆಸ್ ಅನ್ನು ಇದಕ್ಕೋಸ್ಕರವೇ ಸೀಮಿತಗೊಳಿಸುತ್ತೇವೆಂದು ಹೇಳಿ every time you are producing bills ಏನು ಘನತೆ ಇದೆ? ನಾನು ತಮ್ಮನ್ನೇ ಕೇಳಿದ್ದು; supplementary demands ತರಬೇಡಿ, ಬೆಂಗಳೂರಿನಲ್ಲಿ next sessionನಲ್ಲಿ ಮಾಡಿಕೊಳ್ಳಿ, ಏನಾಗುತ್ತದೆ ಅಂತ;

ಶ್ರೀ ಬಿ.ಎಸ್. ಯಡಿಯೂರಪ್ಪ: ಇಲ್ಲಿ ಏನೂ ವಿವರಗಳಿಲ್ಲ. ಎರಡು ನಿಮಿಷಗಳಲ್ಲಿ ಮುಗಿದು ಹೋಗುತ್ತದೆ, ಆನಂತರ, ನೀವು ಚರ್ಚೆ ಮುಂದುವರೆಸಿ.

ಮಾನ್ಯ ಸದಸ್ಯರು: ಇವರು ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಯಾರು ದೊಡ್ಡ ಮನುಷ್ಯರು? ಎದ್ದು ನಿಂತುಕೊಂಡು ಹೇಳಬೇಕು. ಕುಳಿತುಕೊಂಡು ಮಾತನಾಡುವುದೇಕೆ?

ಶ್ರೀ ಜಗದೀಶ್ ಶೆಟ್ಟರ್: ನಾನು ಪ್ರತಿ ಪಕ್ಷದ ನಾಯಕರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ...

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಸದನದ ಸಮಯವನ್ನು ಹಾಳು ಮಾಡುವುದಕ್ಕೆ ಇಲ್ಲಿದ್ದೇವೆಯೇ? ಬಾಯಿಗೆ ಬಂದಂತೆ ಮಾತನಾಡುವುದಕ್ಕೋಸ್ಕರ ನಾನು ಇಲ್ಲಿ ಕುಳಿತುಕೊಂಡಿದ್ದೇನೆಯೇ?

ಶ್ರೀ ಜಗದೀಶ್ ಶೆಟ್ಟರ್: ನಾನು ಪ್ರತಿ ಪಕ್ಷದ ನಾಯಕರುಗಳಲ್ಲಿ ಹಾಗೂ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅದಕ್ಕೋಸ್ಕರ, ದಯವಿಟ್ಟು ಇದು ಕೇವಲ ಎರಡು ವರ್ಷಗಳಿಗೆ ಅವಧಿ ವಿಸ್ತರಣೆ ಮಾಡುವ ಸಲುವಾಗಿ ಇರುವಂತಾದ್ದು, ಮತ್ತು ಅಂತಹ ದೀರ್ಘವಾಗಿ ವಿಚಾರ ಮಾಡುವಂತಹ, ಚರ್ಚೆ ಮಾಡುವಂತಹ ಬಿಲ್ ಇದ್ದಿದ್ದರೆ ನಾವ್ಯಾರೂ ಕೂಡ ಇದನ್ನು ತರಾತುರಿಯಲ್ಲಿ ಮಾಡಿಕೊಳ್ಳುತ್ತಿರಲಿಲ್ಲ. ಇವೊತ್ತು ಲಕ್ಷಾಂತರ ಪ್ರಕರಣಗಳು ಚಾಲ್ತಿಯಲ್ಲಿವೆ. ಈಗಾಗಲೇ ನೂರಾರು ಕಮಿಟಿಗಳು ಕಾನ್‌ಸ್ಟಿಟ್ಯೂಟ್ ಆಗಿವೆ. ಆ ಕಾರ್ಯಕಲಾಪಗಳಿಗೆ ಇವೊತ್ತು ಅವಧಿ ವಿಸ್ತರಿಸುವುದು ಅವಶ್ಯಕವಾಗಿದೆ. ಅದಕ್ಕಾಗಿ ನಾನು ಅವರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಇದಕ್ಕೆ ತಾವೆಲ್ಲರೂ ಅನುಮತಿ ಹಾಗೂ ಸಹಕಾರ ಕೊಟ್ಟು ಈ ಬಿಲ್ಲನ್ನು ಮಂಡನೆ ಮಾಡುವುದಕ್ಕೆ ಹಾಗೂ ಪರ್ಯಾಲೋಚನೆ ಮಾಡಿ ಇದನ್ನು ಪಾಸ್ ಮಾಡುವುದಕ್ಕೆ ದಯವಿಟ್ಟು ಸಹಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈಗಾಗಲೇ ಬಿಲ್ ಮಂಡನೆಯಾಗಿರುವುದರಿಂದ ಪರ್ಯಾಲೋಚನೆ ಮಾಡಿ ಇದಕ್ಕೆ ಅನುಮೋದನೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಬಿಲ್ ಮಂಡನೆಯೂ ಆಗಿಲ್ಲ, ಪರ್ಯಾಲೋಚನೆಯೂ ಆಗಿಲ್ಲ, ಬೇಕಾದರೆ, ಪ್ರೊಸೀಡಿಂಗ್ಸ್ ತೆಗೆದು ನೋಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಂಡನೆಯಾಗಿದೆ ಸರ್.

ಶ್ರೀ ಜಗದೀಶ್ ಶೆಟ್ಟರ್: ಮಂಡನೆಯಾಗಿದೆ ಅಷ್ಟೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೆ, ಇದು ಏನಾಗಿದೆಯೆಂದರೆ, 'ಹುಚ್ಚು ಮುಂಡೆ ಮದುವೇಲಿ ಉಂಡವನೇ ಜಾಣ' ಎಂಬಂತಾಗಿದೆ.

ಶ್ರೀ ಜಗದೀಶ್ ಶೆಟ್ಟರ್: ಅಂತಹ important bills ಯಾವುದಾದರೂ ಇದ್ದರೆ, ನಿಮ್ಮನ್ನು ಬಿಟ್ಟು ನಾವೇನೂ ಪಾಸ್ ಮಾಡಿಕೊಳ್ಳುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್): ಸನ್ಮಾನ್ಯ ಉಪಾಧ್ಯಕ್ಷರೆ, ಈ ಬಿಲ್‌ಗೆ ಯಾರೂ ವಿರುದ್ಧವಾಗಿಲ್ಲ. ಏಕೆಂದರೆ, ಈ ಬಿಲ್‌ನಲ್ಲಿ ಕೇವಲ ಆರು ವರ್ಷ ಇರುವುದನ್ನು ಎಂಟು ವರ್ಷಗಳಿಗೆ extend ಮಾಡತಕ್ಕಂಥ ಒಂದು ಸಣ್ಣ ತಿದ್ದುಪಡಿ ಇರುವಂಥಾದ್ದು 1991ರಲ್ಲಿ unauthorized cultivation regularization act ನ ಸೆಕ್ಷನ್ 94ಕ್ಕೆ ತಿದ್ದುಪಡಿ ತಂದವರೇ ನಾವು. ನಾನು revenue minister ಆಗಿದ್ದಾಗ ಲಕ್ಷಾಂತರ ಬಡಜನರಿಗೆ ಅನುಕೂಲವಾಗಲೆಂದು ನಾವು ಇದನ್ನು ತಂದೆವು. Congress Governmentನಲ್ಲಿ ಆಗ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ನಾವೆಲ್ಲರೂ ಸೇರಿಕೊಂಡು ಇದನ್ನು ತರಬೇಕೆಂದು ನಿರ್ಧರಿಸಿ, ಲಕ್ಷಾಂತರ ಜನರಿಗೆ ಸೌಲಭ್ಯ ಕೊಟ್ಟಾಯಿತು. ಅದಕ್ಕೆ ಮೂರು ವರ್ಷಗಳ ಕಾಲವನ್ನು ಸೀಮಿತವಾಗಿ ಇಟ್ಟಿದ್ದೆವು. ತದನಂತರ, ಮನಃ ಅದೇ ರೀತಿಯಾಗಿ extend ಆಗುತ್ತಾ ಹೋಗಿ ಅದು ಆರಕ್ಕೆ ಬಂತು. ಆರು ಹೋಗಿ ಈಗ ಎಂಟಕ್ಕೆ ಬಂತು. ಹಿಂದೆ ಏನು ಕಡಿವಾಣ ಹಾಕಿತ್ತು ಎಂದರೆ, within this period land grant committeeಗಳು ಒಂದು ವರ್ಷ ಅಥವಾ ಎರಡು ವರ್ಷಗಳೊಳಗೆ ಈ ಕೇಸ್‌ಗಳನ್ನು disposed off ಮಾಡಬೇಕೆಂದು ಒಂದು ಅವಧಿ ನಿಗದಿಪಡಿಸಿಕೊಡಲಾಗಿತ್ತು. ಇವು ಏಕೆ ಇವೊತ್ತು ಆಗುತ್ತಿಲ್ಲವೆಂದರೆ, ಒಂದು ಕಡೆ ನೀವು ಕಮಿಟಿಗಳನ್ನು ಮಾಡುತ್ತೀರಿ, ಅವರಿಗೆ ಆಸಕ್ತಿ ಇರುವುದಿಲ್ಲ. ಆ ಕಮಿಟಿಯವರು ಆ ದರಖಾಸ್ತು ಜಮೀನನ್ನು ಅಥವಾ ಸರ್ಕಾರಿ ಭೂಮಿಯನ್ನು ನೋಡಿಕೊಂಡು ಇನ್ಸ್‌ಪೆಕ್ಷನ್ ಮಾಡಿ ರೆಗ್ಯೂಲರೈಸ್ ಮಾಡುವುದಿಲ್ಲ. ಎರಡನೆಯದು ಏನೆಂದರೆ, ಕೆಲವು prime landಗಳಿವೆ, ಯಾವುವು ಬೆಂಗಳೂರು ಸಿಟಿ ಹತ್ತಿರ ಇರುವಂತಾದ್ದು, ಹುಬ್ಬಳ್ಳಿ-ಧಾರವಾಡ ಸಿಟಿ, ಬೆಳಗಾಂ ಸಿಟಿಯಂತಹ ಅನೇಕ ಸಿಟಿಗಳೇನಿವೆ ಅಥವಾ ಟೌನ್‌ಗಳೇನಿವೆ, ಆ ಟೌನ್‌ಗಳ ಸಮೀಪವಿರುವ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ಕೆಲವು ಜನರು ಈ ಕಮಿಟಿಗಳ ಮುಂದೆ ಬಂದು ಈಗ ರೆಗ್ಯುಲರೈಸ್ ಮಾಡಿಸಿಕೊಳ್ಳುತ್ತಿದ್ದಾರೆ. ಈ ಹಿಂದೆ ಏನು ಅಪ್ಲಿಕೇಶನ್ಸ್ ಇದ್ದವು, ಆ ಅಪ್ಲಿಕೇಶನ್‌ಗಳನ್ನು ನೀವು ತರಿಸಿ ನೋಡಿದರೆ, ಒಂದು cur off date ಏನು ನಿಗದಿಪಡಿಸಲಾಗಿತ್ತು, ಆ cut off dateಗೆ ಹೋಲಿಸಿದಾಗ, ಈಗ cut off date ಮುಗಿದ ಮೇಲೆ ಅದರ ಎರಡು ಪಟ್ಟು ಅಪ್ಲಿಕೇಶನ್ಸ್ ಬರುತ್ತಿವೆ. ಏಕೆ ಬರುತ್ತಿವೆ ಎಂದರೆ, ಈಗ land grabbing, property developers ಇವರೆಲ್ಲರೂ ಕೂಡ ಇದರಲ್ಲಿ interfere ಆಗಿ ಇವೊತ್ತಿನ ದಿವಸ ಸರ್ಕಾರಿ ಜಮೀನೆಲ್ಲವನ್ನೂ ಬಡವರ ಹೆಸರಿನಲ್ಲಿ ಮಾಡಿಕೊಂಡು ಮನಃ ಅದನ್ನು ಖರೀದಿಸಿದಂತೆ ಮಾಡಿ, ಸರ್ಕಾರದಿಂದ

ಪರ್ಮಿಶನ್ ತೆಗೆದುಕೊಂಡು ಮಾರಾಟ ಮಾಡುತ್ತಿರುವ ಪ್ರಕರಣಗಳು ಅನೇಕ ಕಡೆಗಳಲ್ಲಿ ಜರುಗುತ್ತಿದೆ. ಅದಕ್ಕೋಸ್ಕರ, ಇದು ಕೇವಲ ಒಂದು ಕಮಿಟಿಗೆ ಎಕ್ಸ್‌ಟೆನ್‌ಶನ್ ಇರತಕ್ಕಂಥಾದ್ದು ಮಾತ್ರವಲ್ಲ, ಇದರ ಹಿನ್ನೆಲೆಯನ್ನೂ ತಾವು ನೋಡ ಬೇಕಾಗುತ್ತದೆ. ಕಮಿಟಿಗಳಲ್ಲಿ ಆಗುವುದನ್ನು ನೀವು ರಿವ್ಯೂ ಮಾಡದೇ ಹೋದರೆ ಅಥವಾ ನಮ್ಮ ಡೆಪ್ಯುಟಿ ಕಮೀಷನರ್ಸ್ ಆಗಲಿ, ಅಸಿಸ್ಟೆಂಟ್ ಕಮೀಷನರ್ಸ್ ಆಗಲಿ, ಇದನ್ನು ಸಂಪೂರ್ಣವಾಗಿ ರಿವ್ಯೂ ಮಾಡದೇ ಹೋದರೆ ಖಂಡಿತವಾಗಿಯೂ ಈಗ ಏನು ರೆಗ್ಯುಲರೈಜೇಶನ್ ಆಗುತ್ತಿವೆ, ಅದರಲ್ಲಿ ಅನ್ಯಾಯವಾಗುತ್ತಿದೆ. ಏಕೆಂದರೆ, ನಾವು ಡೇಟ್ ಹಿಂದಕ್ಕೆ ಕೊಟ್ಟಿದ್ದೆವು. ಆರಗ ಜ್ಞಾನೇಂದ್ರರವರಿಗೆ ಇದು ಗೊತ್ತಿರಬಹುದು. ನಾವು 14ನೇ ಏಪ್ರಿಲ್ ಅಂದರೆ, ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹುಟ್ಟಿದ ದಿವಸದಿಂದ ಮೂರು ವರ್ಷದೊಳಗೆ ಇದ್ದರೆ, ಅದನ್ನು ಮಾಡಬೇಕು. ಎಸ್‌ಸಿ:ಎಸ್‌ಟಿಯವರಿಗೆ ಒಂದು ವರ್ಷ ಕ್ವಾಲಿಫೈಡ್ ಎಂದು ಮಾಡಿದ್ದರೆ, ಅವರಿಗೆ ರಿಯಾಯಿತಿ ಕೊಟ್ಟು ಒಂದು ವರ್ಷದ್ದು ಮಾಡಬೇಕು. ರೆಕಾರ್ಡ್ ಇಲ್ಲವೆಂದರೆ ಅಸಿಸ್ಟೆಂಟ್ ಕಮಿಷನರ್‌ರವರು ಖುದ್ದಾಗಿ ಹೋಗಿ ತಪಾಸಣೆ ಮಾಡಿ ರೆಗ್ಯುಲರೈಸ್ ಮಾಡಬೇಕು ಎನ್ನತಕ್ಕಂಥ ರಿಯಾಯಿತಿಯನ್ನು ಕೊಟ್ಟಿತು. ಇದು ಕೊಟ್ಟಮೇಲೆ ಈಗ ಆರು ವರ್ಷಗಳಾದೂ ಮುಗಿಯುತ್ತಿಲ್ಲ. ನೀವು ಪುನಃ ಎರಡು ವರ್ಷ ಕೊಡುತ್ತಿದ್ದೀರಿ. ನೀವು ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡದಿದ್ದರೆ, ಇದನ್ನು ಒಂದು ಇಲ್ಲವೇ ಎರಡು ವರ್ಷದಲ್ಲಿ ಮುಗಿಸಬೇಕು ಎನ್ನತಕ್ಕ ಪ್ರಾಮಾಣಿಕವಾಗಿ ಕಡ್ಡಾಯವಾಗಿ ಹೇಳದೆ ಹೋದರೆ, ಇದು ಇದೇ ರೀತಿಯಾಗಿ ಎಕ್ಸ್‌ಟೆಂಡ್ ಆಗಿಕೊಂಡೇ ಹೋಗುತ್ತದೆ. ಕೊನೆಗೆ ಎಲ್ಲಿಯವರೆಗೆ ಬರುತ್ತದೆಂದರೆ ಪ್ರೈಮ್ ಲ್ಯಾಂಡ್, ಗೌರ್ನಮೆಂಟ್ ಲ್ಯಾಂಡ್‌ಗಳನ್ನೂ ಕೂಡ ರೆಗ್ಯುಲರೈಸ್ ಮಾಡಿಕೊಂಡು ಪ್ರಾಪರ್ಟಿ ಓನರ್ಸ್, ಡೆವಲಪರ್ಸ್ ಇವರೆಲ್ಲರು ಕೂಡ ಮಾಡಿಕೊಳ್ಳುತ್ತಾರೆ. ನಿನ್ನೆ ಒಂದು ಹಗರಣ ಬಂದ ಕೂಡಲೇ ಎಲ್ಲರೂ ಮೈಮೇಲೆಬಿದ್ದು ಅದೇನೇನೊ ಹೇಳಿದರು. ನೋಡೋಣ ನಾಳೆ ಏನಾಗುತ್ತದೆ, ಸರ್ಕಾರಿ ಜಮೀನುಗಳು, ಫಾರೆಸ್ಟ್ ಜಮೀನುಗಳು, ಗೋಮಾಳಗಳು ಮತ್ತು ನಮ್ಮ ನಾಗಮಂಗಲದ ಕಡೆ ಇರತಕ್ಕ ಅಮೃತ್‌ಮಹಲ್ ಕಾವಲ್ ಇವೆಲ್ಲವೂ ಕೂಡ ರೆಗ್ಯುಲರೈಸ್ ಮಾಡಿಕೊಳ್ಳತಕ್ಕ ಜನರು ಸಹ ಇದ್ದಾರೆ. ಬಡವರು ಒಂದು ಕಡೆ ಅವರು ಎಷ್ಟೇ ಗೋಳಾಡಿದರೂ ಸಹ ಅವರದ್ದು ಆಗುವುದಿಲ್ಲ. ಇಲ್ಲಿ ಶಿಫಾರಸ್ಸು ಇರತಕ್ಕವರು ಈವತ್ತು ದುರ್ದೈವದಿಂದಲೋ ಸುದೈವದಿಂದಲೊ ಮೆಂಬರ್‌ಗಳಿಗೆ ಕಮಿಟ್‌ಮೆಂಟ್ ಇಲ್ಲದಿದ್ದರೆ ಖಂಡಿತವಾಗಿ ನಮ್ಮ ಉದ್ದೇಶ ಸಫಲವಾಗುವುದಿಲ್ಲ. ಅದಕ್ಕಾಗಿ ನೀವು ಏನಾದರೂ ರಿವ್ಯೂ ಮಾಡಿದ್ದೀರಾ; ಮೀಟಿಂಗ್ ಕರೆಸಿದ್ದೀರಾ?

ಎಷ್ಟು ಎಕರೆ ಜಮೀನು ಇನ್ನು ಅನ್ ಅಥರೈಜ್ ಕಲ್ಟಿವೇಷನ್ ಕೆಳಗೆ ರೆಗ್ಯುಲರೈಸ್ ಮಾಡುವಂಥದ್ದು ಉಳಿದಿದೆ? ಯಾವ್ಯಾವ ಟೌನ್‌ಗಳಲ್ಲಿ ಎಷ್ಟೆಷ್ಟು ಜಮೀನು ಇದೆ? ಕಲ್ಟಿವಬಲ್ ಲ್ಯಾಂಡ್‌ಗೆ ಅದು ಸಂಬಂಧಪಟ್ಟಿದೆಯೇ? ಸರ್ಕಾರಿ ಜಮೀನು ಅನ್‌ಕಲ್ಟಿವಬಲ್ ಇದ್ದರೂ ಕೂಡ ಗ್ರಾಂಟ್ ಮಾಡುವುದು. ಏಕೆಂದರೆ ನೂರು ಅಪ್ಲಿಕೇಷನ್‌ನಲ್ಲಿ ಅದೊಂದನ್ನು ಕೊಟ್ಟು ತೆಗೆದುಕೊಂಡು ಹೋಗುವುದು. ಇದೆಲ್ಲವೂ ಕೂಡ ನಡೆದಿದೆ. ಅದಕ್ಕಾಗಿ ಇದನ್ನು ಬಹಳ careful ಆಗಿ ಮಾಡಬೇಕು. ಏನೋ ಸುಮ್ಮನೆ ಒಂದು ಅಮೆಂಡ್‌ಮೆಂಟ್ ಇದೆ ಎಂದಲ್ಲ. ಕೊಟ್ಯಾಂತರ ರೂಪಾಯಿ ಈ ಕಮಿಟಿಯಿಂದ ಮಾಡಿಕೊಳ್ಳತಕ್ಕ ಸಾಧ್ಯತೆ ಇದೆ. ಯಾರು? ದುರುಪಯೋಗ ಮಾಡತಕ್ಕಂಥವರು. ಅದಕ್ಕಾಗಿ ನೀವು ಎಲ್ಲರನ್ನೂ ಕರೆಸಿ, ಡೆಪ್ಯುಟಿ ಕಮಿಷನರ್‌ರವರುಗಳನ್ನು ಕರೆಸಿ ಅಥವಾ ಅಸಿಸ್ಟೆಂಟ್ ಕಮಿಷನರ್‌ರವರ ಒಂದು ಕಾನ್‌ಫರೆನ್ಸ್ ಮಾಡಿ ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಲ್ಯಾಂಡ್‌ನ್ನು ಈವತ್ತು ಕಾನೂನಿನ ಪ್ರಕಾರ ರೆಗ್ಯುಲರೈಸ್ ಮಾಡುವುದಕ್ಕೆ ಅವರೇಬಲ್ ಇದೆ ಮತ್ತು ಕಾನೂನು ಬಾಹಿರವಾಗಿ ಯಾರು ಕಲ್ಟಿವೇಟ್ ಮಾಡುತ್ತಿದ್ದಾರೊ ಅವರನ್ನು ತೆಗೆದು ಹಾಕಲು ನೀವೇನು ಮಾಡುತ್ತಿದ್ದೀರಿ; ಇದೆಲ್ಲವನ್ನೂ ಕೂಡ ನೋಡಬೇಕು. ಅನಂತರ ಲ್ಯಾಂಡ್ ಗ್ರಾಂಟ್ ರೂಲ್ಸ್, ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಪ್ರಕಾರ ಅವೇಲಬಲ್ ಇರತಕ್ಕ ಲ್ಯಾಂಡ್‌ನ್ನು 60 ಪರ್‌ಸೆಂಟ್ ಎಸ್.ಸಿ, ಎಸ್‌ಟಿ, ಗೆ ಹೋಗುತ್ತದೆ. ಉಳಿದ 40 ಪರ್‌ಸೆಂಟ್‌ನಲ್ಲಿ ಸರ್‌ಪ್ಲಸ್ ಲ್ಯಾಂಡ್ ಇದ್ದಾಗ ಬೇರೆಯವರಿಗೆ ಕೊಡಬೇಕು. ಅದೆಲ್ಲವನ್ನೂ ಅನೇಕ ಜನರು ಮಾಡುತ್ತಿಲ್ಲ. ಅವರು ಆ ಕಮಿಟಿಗೆ ಸಂಪೂರ್ಣ ಅಧಿಕಾರ ಇದೆಯೆಂದು ಹೇಳುವುದು; ತಕ್ಷಣ ರೆಗ್ಯುಲರೈಜೇಷನ್ ಮಾಡಿ ಅವನಿಗೆ ಸರ್ಟಿಫಿಕೇಟ್ ಕೊಟ್ಟು ಕಳುಹಿಸುವುದು. ಅದಕ್ಕಾಗಿ ಭೂ ಸುಧಾರಣೆ ಕಾನೂನಾಗಲಿ ನಾವು ಇದಕ್ಕೆ ಬಹಳಷ್ಟು ಹೋರಾಟ ಮಾಡಿದ್ದೇವೆ, ಪ್ರಯತ್ನಮಾಡಿದ್ದೇವೆ, ಸದನ ಒಳಗಡೆ ಮತ್ತು ಹೊರಗಡೆ ಕೂಡ ಅದಕ್ಕೆ ಲಾಬಿ ಮಾಡಿ ಲಕ್ಷಾಂತರ ಜನರಿಗೆ ಲಾಭ ಮಾಡತಕ್ಕದ್ದನ್ನೂ ಕೂಡ ಮಾಡಿತ್ತು. ಈ ಹಿಂದೆ ಆಗಿರುವುದು ಮಾನ್ಯ ಜ್ಞಾನೇಂದ್ರರವರಿಗೆ, ಮಾನ್ಯ ಯಡಿಯೂರಪ್ಪನವರಿಗೆ ಗೊತ್ತಿದೆ. ಮೊದಲು ಲ್ಯಾಂಡ್ ಟ್ರಿಬ್ಯುನಲ್ ತಾಲ್ಲೂಕಿಗೆ ಕೇವಲ ಒಂದೇ ಇತ್ತು. ನಾನು ಅದನ್ನು ಒಂದು ತಾಲ್ಲೂಕಿಗೆ 3–4 ಮಾಡಿದೆವು. ಏಕೆ? ಕೇಸು quick ಆಗಿ ಡಿಸ್‌ಪೋಸ್ ಆಗಿ ಬಡವರಿಗೆ ಓನರ್‌ಶಿಪ್ ಸಿಗಲಿ, ಸತಾಯಿಸುತ್ತಾರೆ ಎಂಬ ದೃಷ್ಟಿಯಿಂದ ನಾಲ್ಕು ನಾಲ್ಕು ಕಮಿಟಿ ಮಾಡಿ ನಾವು ಸುಮಾರು 6–7 ಲಕ್ಷ ಕೇಸನ್ನು ಡಿಸೈಡ್ ಮಾಡಿದೆವು. ಹಾಗೆ ಏನಾದರೂ ಒಂದು ಕಡಿವಾಣವನ್ನು ಹಾಕಬೇಕು. ಇದು ಎರಡು ವರ್ಷದಲ್ಲಿ ಆಗಬೇಕು. ಎಲ್ಲಿ ಕೇಸಸ್ ಹೆಚ್ಚಾಗಿದೆ ಅಲ್ಲಿ ಎರಡು ಕಮಿಟಿಗಳನ್ನು ಮಾಡಿ. ಮೂರು

ಕಮಿಟಿಯನ್ನು ಮಾಡಿ. ಅದಕ್ಕೆ ಯಾವ ಕಾನೂನು ಅಡ್ಡಿ ಬರುವುದಿಲ್ಲ. ಆದರೆ ಅದಕ್ಕೆ ಇಚ್ಛಾಶಕ್ತಿ ಬೇಕು. ಇದನ್ನು ಮಾಡಬೇಕು, ನಿಮ್ಮಲ್ಲಿ ರೂಲ್ಸ್ ಇದೆ. ಅದನ್ನೂ ಕೂಡ ವೈಲೇಟ್ ಮಾಡುತ್ತಿದ್ದೀರಿ. ಈಗ ಇನ್ನೊಂದು ತಿದ್ದುಪಡಿ ಬಂದಿದೆ. ಮೊದಲು ನಮಗೆ 6 ರಿಂದ 8 ಎಂದು ಕೊಟ್ಟಿದ್ದಿರಿ.

ಶ್ರೀ ಜಗದೀಶ್ ಶೆಟ್ಟರ್: ಐದು ವರ್ಷ ಅವಧಿಯನ್ನು ಕೊಟ್ಟುಬಿಟ್ಟರೆ, ಪ್ರತಿ ಎರಡು ವರ್ಷಕ್ಕೆ ಒಮ್ಮೆ ವಿಸ್ತರಣೆ ಮಾಡಿಕೊಂಡು ಬರಲಿ. ಟೋಟಲ್ ಐದು ವರ್ಷ ವಿಸ್ತರಣೆ ಮಾಡಿಬಿಡುವುದು ಎಂದು ಇನ್ನೊಂದು ತಿದ್ದುಪಡಿ ಇದೆ.

Sri M. Mallikarjun: No. That is wrong. ಹಾಗಾದರೆ ನಾವು ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್‌ನ್ನು ತರಲು ಆಗುತ್ತಿತ್ತೆ? ನಾವು ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್‌ನಲ್ಲಿ ಏಕೆ ಹಾಕಿದ್ದೇವೆಂದರೆ there is every possibility of dispossessing poor people. ಬಡವರಿಗೆ ಇದ್ದವಂಥವರು disposes ಮಾಡಿ ಬೇರೆಯವರು ಬರುತ್ತಾರೆ. ಅದಕ್ಕೆ ಭೂ ಸುಧಾರಣೆ ಕಾನೂನಿನಲ್ಲಿ ಟ್ರಿಬ್ಯುನಲ್‌ನ್ನೇ ಹೆಚ್ಚಿಗೆ ಮಾಡಿದ್ದೇವೆ. ಒಂದು ಇದ್ದಲ್ಲಿ ನಾಲ್ಕು, ಮೂರು, ಎರಡು ಈ ರೀತಿಯಾಗಿ ಮಾಡಿ ಒಬ್ಬೊಬ್ಬರಿಗೆ 200–300 ಕೇಸಸ್ ಬಂದು ಅವರು ಡಿಸ್‌ಪೋಸ್ ಮಾಡಿ ಗುರಿಯನ್ನು ತಲುಪಬೇಕು ಎಂದು ಮಾಡಿದೆವು. ನೀವು ಐದು ವರ್ಷ ಕೊಟ್ಟರೆ ಈಗೆಲ್ಲಾ ವಿಧಾನ ಸೌಧವನ್ನೂ ಎನ್‌ಕ್ರೋಚ್ ಮಾಡುತ್ತಾರೆ. ಈಗ ಇರತಕ್ಕ ಅನೇಕ unwanted cases ಏನಿದೆ, ಅದಕ್ಕಾಗಿ ನೀವು ಕಮಿಟಿಗಳನ್ನು ಬೇಕಾದರೆ ಜಾಸ್ತಿ ಮಾಡಿ. ಒಂದು ವರ್ಷ target ಕೊಡಿ. ಅಥವಾ ನಿಗದಿ ಮಾಡಿ. ಅದು ಆದರೆ ಏನಾದರೂ ಪ್ರಯೋಜನವಾಗುತ್ತದೆ. ಇಲ್ಲದಿದ್ದರೆ ಸುಮ್ಮನೆ ನಾವು ತಳ್ಳಿಕೊಂಡು ಹೋಗಿ ಹೋಗಿ ಸರ್ಕಾರಿ ಜಮೀನುಗಳು ಎಲ್ಲೆಲ್ಲಿ ಇವೆ. ಶಿಫಾರಸ್ಸು ಇರುವ ವ್ಯಕ್ತಿಗಳು ಹೋಗಿ ವಿಲೇಜ್ ಅಕೌಂಟೆಂಟ್‌ನ್ನು ಹಿಡಿದು ಬರೆಸಿಕೊಂಡು ರೆಗ್ಯುಲರೈಸ್ ಮಾಡಿಸಿಕೊಳ್ಳುತ್ತಾರೆ. ಅದನ್ನು ನಿಮ್ಮ ಪಕ್ಷದವರೂ ಮಾಡಬಹುದು, ನಮ್ಮ ಪಕ್ಷದವರೂ ಮಾಡಬಹುದು. ಯಾವ ಪಕ್ಷದವರು ಬೇಕಾದರೂ ಮಾಡಬಹುದು. ಯಾರಿಗೆ ಕಮಿಟ್‌ಮೆಂಟ್ ಇರುವುದಿಲ್ಲವೋ, ಪಾರ್ಟಿ, ಪಕ್ಷ ಇರುವುದಿಲ್ಲವೋ ಅವರಿಗೆ ಏನಾದರೂ ಮಾಡಿ ಇದನ್ನು ನುಂಗಬೇಕೆಂದು ಇರುತ್ತದೆ. ಆದ್ದರಿಂದ ದಯವಿಟ್ಟು ಆ ಗೋಜಿಗೆ ನೀವು ಹೋಗಬೇಡಿ. ಹಿಂದಿನ ಉದಾಹರಣೆಗಳನ್ನು ನೋಡಿ. ಏನು ಮಾಡಿದ್ದಾರೆ, ಯಾವ ಉದ್ದೇಶಕ್ಕಾಗಿ ಮಾಡಿದ್ದಾರೆ ಎಂಬುದನ್ನು ನೋಡಿ. ತಾವು ಇದನ್ನು ಐದು ವರ್ಷಕ್ಕೆ ಎಂದು ಮಾಡಿ ಪುನಃ ಗೊಂದಲಕ್ಕೆ ಸಿಕ್ಕಿಹಾಕಿಸಿ ಇರತಕ್ಕ ಬಡವರಿಗೆ ಕೂಡ ನಾವು ಸತ್ಯನಾಶ ಮಾಡುವುದ ಬೇಡ.

ಆದ್ದರಿಂದ ದಯವಿಟ್ಟು ತಾವು ಇದಕ್ಕೆ ಸರಿಯಾಗಿ ಪರಿಶೀಲನೆ ಮಾಡತಕ್ಕ ಅವಶ್ಯಕತೆ ಇದೆಯೆಂದು ಹೇಳಲು ಇಚ್ಛೆಪಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಅವರೇನು ಇದಕ್ಕೆ ಅಮೆಂಡ್‌ಮೆಂಟ್ ತಂದರು ಅದನ್ನು ಸ್ವಾಗತಿಸುತ್ತೇನೆ. ಎರಡು ವರ್ಷಕ್ಕೆ ಏಕೆ ಅಮೆಂಡ್‌ಮೆಂಟ್ ಮಾಡುತ್ತಿದ್ದೀರಿ ಒಂದು ಐದಾರು ವರ್ಷಕ್ಕೆ ಮಾಡಿ ಎಂದು ನಾನೇ ಹೇಳುತ್ತಿದ್ದೆ. Now they have brough in a fresh amendment to the original Bill.

Sri M. Mallikarjun Kharge: No. I don't agree for that.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಒಪ್ಪುತ್ತೇನೆ. ನಾನೇ ಇದರ ಬಗ್ಗೆ ಸಜೆಸ್ಟ್ ಮಾಡಬೇಕೆಂದಿದ್ದೆ. ಏಕೆಂದರೆ ಎರಡು ವರ್ಷಕ್ಕೆ election time ಬಂದು ಬಿಡುತ್ತದೆ. ನೀವು ಮಾಡುವ ಸಮಿತಿಗೆ ಮತ್ತೆ ಐದಾರು ತಿಂಗಳು ವ್ಯಾಲಿಡಿಟಿ ಹೋಗಿಬಿಡುತ್ತದೆ. Next Government ಬರುವವರೆಗಾದರೂ ನೀವು ಸಮಯವನ್ನು ಇಟ್ಟುಕೊಳ್ಳಬೇಕಾಗುತ್ತದೆ. General election ಗೆ ಎಷ್ಟು ಸಮಯ ಇದೆಯೆಂದು ತಿಳಿದುಕೊಂಡಿದ್ದೀರಿ? ಎರಡು ವರ್ಷಕ್ಕೆ ಇದು ಮತ್ತೆ ಸೀಜ್ ಆದರೆ ಹೊಸ ಗೌರ್ನಮೆಂಟ್ ಬಂದು ಅಮೆಂಡ್‌ಮೆಂಟ್ ಮಾಡುವವರೆಗೆ ಪರಿಸ್ಥಿತಿಗಳನ್ನು ಯೋಚನೆ ಮಾಡಬೇಕು. You are right.

ಶ್ರೀ ಎನ್. ಧರ್ಮಸಿಂಗ್: ಈ ಬಿಲ್ ಆದಮೇಲೆ ಚುನಾವಣೆಯೇ ಬರಲಿ ಎಂದು ಅವರು ತಿಳಿದುಕೊಂಡಿದ್ದಾರೆ!

ಶ್ರೀ ಜೆ.ಸಿ. ಮಾಧುಸ್ವಾಮಿ: ಎರಡನೆಯದಾಗಿ, ಈಗಾಗಲೇ ಮಂಜೂರಾಗಿ ಹಕ್ಕುಪತ್ರ ಬರೆದು ಕೊಡಲಾರದಂಥ ಸ್ಥಿತಿಯಲ್ಲಿರುವ ಹುಲ್ಲುಗಾವಲುಗಳು, ಗೋಮಾಳಗಳ ಬಗ್ಗೆ ನಾನು ಅನೇಕ ಸಲ ನಿಮಗೆ ಪ್ರಶ್ನೆ ಮಾಡಿದ್ದೆ. ಹೈಕೋರ್ಟಿನ ಡಿಸಿಷನ್ ಆದ ಮುಂದಕ್ಕೆ ಗ್ರ್ಯಾಂಟ್ ಮಾಡುವುದಿಲ್ಲ. ಮಾಡುವುದಕ್ಕೆ ಆಗುವುದಿಲ್ಲ. ಆದರೆ ಹೈಕೋರ್ಟ್ ಡಿಸಿಷನ್ ಆಗುವುದಕ್ಕೆ ಮೊದಲೇ ಗ್ರ್ಯಾಂಟ್ ಆಗಿರುವ ಜಮೀನಿಗೆ ನೀವು ಏನು ಎಂದು ಹೇಳಿಲ್ಲ. ಒಂದು ಜಮೀನಿನಲ್ಲಿ ಯಾರಿಗೋ ಸಾಗುವಳಿ ಚೀಟಿ ಸಿಕ್ಕಿಬಿಟ್ಟಿದೆ, ಹೈಕೋರ್ಟ್ ಡಿಸಿಷನ್ ಆಗುವುದಕ್ಕೆ ಮೊದಲು ಏನು ಸಾಗುವಳಿ ಚೀಟಿ ಸಿಕ್ಕಿದೆ, ಅವನು owner of the land ಆಗಿದ್ದಾನೆ. ಪಕ್ಕದಲ್ಲಿ ಇದ್ದವನ್ನು ಯಾವುದೋ ಒಂದು ಟೆಕ್ನಿಕಲ್ ಕಾರಣಕ್ಕಾಗಿ ಆ ಸಾಗುವಳಿ ಚೀಟಿಯನ್ನು ತೆಗೆದುಕೊಂಡಿಲ್ಲವೆಂದರೆ, ಈಗ ಕೊಡಲು ನಮಗೆ ಹೈಕೋರ್ಟ್‌ನ ಆದೇಶ ಅಡ್ಡಿಯಾಗಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಯಾವ

ತಹಶೀಲ್ದಾರರೂ ಸಹ ಅವರಿಗೆ ಸಾಗುವಳಿ ಚೀಟಿ ಕೊಡುತ್ತಿಲ್ಲ. ತಾವು ಈ ಬಿಲ್ಲಿನಲ್ಲಾದರೂ ಅಥವಾ ಕಾನೂನಿನಲ್ಲಾದರೂ ಅದಕ್ಕೆ ಏನಾದರೂ ಒಂದನ್ನು ತರಬೇಕು. ಮೂರನೆಯದು, ಫಾರಂ 50ರಲ್ಲಿ ರಿಜೆಕ್ಟ್ ಆದವರು 53ರಲ್ಲಿ ಅಪ್ಲಿಕೇಷನ್‌ಗಳನ್ನು ಕೊಟ್ಟಿದ್ದಾರೆ you have to be very clear. Form 50 ರಲ್ಲಿ ರಿಜೆಕ್ಟ್ ಆದವರನ್ನು 53ರಲ್ಲಿ entertain ಮಾಡಬಾರದಿತ್ತು. ಆದರೆ ನಿಮ್ಮ ಅಧಿಕಾರಿಗಳು ಅರ್ಜಿಗಳನ್ನು ತೆಗೆದುಕೊಂಡುಬಿಟ್ಟಿದ್ದಾರೆ. ಆ ಮಧ್ಯೆ ನಾನು ಪಾರ್ಟಿಷನ್ ಆಗಿದ್ದೇನೆಂದು ರೆಕಾರ್ಡ್‌ಗಳನ್ನು ಕ್ರಿಯೇಟ್ ಮಾಡಿದ್ದಾರೆ rejection ಇದ್ದ ಎಲ್ಲಾ ಗ್ರೌಂಡ್‌ನ್ನು ವಯಲೇಟ್ ಮಾಡುವಂತೆ ಮಾಡಿದ್ದಾರೆ. ಫಾರಂ 53ರಲ್ಲಿ ಕೇಳಿದ್ದು ಅನಿವಾರ್ಯ ಕಾರಣಗಳಿಂದ ಯಾರಿಗಾದರೂ ಅರ್ಜಿಯನ್ನು ಹಾಕಲು ಆಗದವರಿಗೆ who is qualified as on the date of Form 50, ಅವರು ಮಾತ್ರ ಫಾರಂ 53ರಲ್ಲಿ ಬರಬಹುದು ಎಂದು ಹೇಳಿದಿದ್ದು. ಫಾರಂ 50ರಲ್ಲಿ ರಿಜೆಕ್ಟ್ ಆಗಿ 53ಗೆ ಬರುವುದು, 50 ರಲ್ಲಿ ಅರ್ಜಿ ಹಾಕುವ ದಿವಸ under age ಇದ್ದವನು 53ರಲ್ಲಿ ಬರುವುದು. ಈ ಅರ್ಜಿಗಳನ್ನೆಲ್ಲಾ ಅಧಿಕಾರಿಗಳು ತೆಗೆದುಕೊಂಡು ರೆಕಾರ್ಡ್ಸ್‌ನ್ನು built up ಮಾಡಿರುವುದು. ಇದಕ್ಕೆ ತಾವು ಕಾನೂನಿನಲ್ಲಿ ಎಲ್ಲಾದರೂ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ದಯಮಾಡಿ ಇದನ್ನು ಹೇಳಿ. ನಾನು ಈ ಬಿಲ್ಲಿಗೆ ವಿರೋಧವಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಕೃಷ್ಣಪ್ಪ (ವರ್ತೂರು) : ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಬಹಳ ಸೂಕ್ಷ್ಮವಾದ ವಿಚಾರವೊಂದನ್ನು ಮಾನ್ಯ Revenue Ministerರವರ ಗಮನಕ್ಕೆ ತರಬೇಕಾಗಿದೆ. ಬೆಂಗಳೂರಿನಲ್ಲಿ ಒಂದು ವಾರದಲ್ಲಿ 7–14 murder ಗಳಾಗಿವೆ. ನಾನು Social Welfare Minister ಆಗಿದ್ದಾಗ ನೋಡಿದ್ದ ಅಂಕಿ ಅಂಶಗಳು ಪ್ರಕಾರ ಕರ್ನಾಟಕ ರಾಜ್ಯದಲ್ಲಿ ದಲಿತರು ಮತ್ತು ಹಿಂದುಳಿದವರೂ highest murders ಆಗಿರುವುದು ಒಂದು ಭೂಮಿಗಾಗಿ, ಇನ್ನೊಂದು ಹೆಂಗಸರ ವಿಚಾರದಲ್ಲಿ. ಇನ್ನು ಮಿಕ್ಕಿದ್ದೆಲ್ಲಾ lowest number of incidents in the state. Bangalore (Rural) & (Urban) ಮತ್ತು kolar ಈ ಭಾಗದಲ್ಲಿ ಇವತ್ತೇನು ಈ ಭೂಮಿ ಬಗ್ಗೆ ಜನರ ಮಧ್ಯೆ ವ್ಯತ್ಯಾಸಗಳಾಗಿ murderಗಳಾಗುತ್ತಿವೆ, ಅವೆಲ್ಲವೂ ಇದೇ ಕೇಸ್‌ಗಳೇ. ಆದ್ದರಿಂದ ಶ್ರೀಮಾನ್ ಖರ್ಗೆಯವರು ಹೇಳಿದ ಹಾಗೆ, it needs a deep study. ಆಮೇಲೆ, ಭೂಮಿ ಬೆಲೆ ಎಷ್ಟಿದೆ ಎಂದರೆ, ಈಗ Bangalore (South) (North) (East) ನಲ್ಲಿ ಒಂದು ಚದರ ರಡಿ 6 ಸಾವಿರ ರೂಪಾಯಿಗಳಿಗೆ ಹೋಗಿದೆ. 6 ಸಾವಿರ ರೂಪಾಯಿಗಳಿಗೆ ಹೋಗಿರುವಂತಹ ಪ್ರದೇಶದಲ್ಲೂ ಕೂಡ ಈ ತರಹದ ಘಟನೆಗಳು

ನಡೆಯುತ್ತಿವೆ. ಆದ್ದರಿಂದ ಇದಕ್ಕಾಗಿ ನಾವೇನೂ ಬಹಳ ಆತುರ ಪಡಬೇಕಾಗಿಲ್ಲ. ಇದರ ಅಂಕಿ ಅಂಶಗಳು ರಾಜ್ಯದಲ್ಲಿ ಎಲ್ಲೆಲ್ಲಿ ಇವೆ ಎಂಬುದನ್ನು study ಮಾಡಿ ನೋಡಬೇಕಾಗಿದೆ. ಎಲ್ಲಾ retired Tahasildars & Assistant Commissioners, ಇದು ಹೇಳಬಾರದು, ಎಲ್ಲಾ ಸರ್ಕಾರಗಳು ಇದ್ದಾಗಲೂ ಕೂಡ ಇದು ನಡೆದಿದೆ, ಈಗಲೂ ನಡೆಯುತ್ತಿದೆ, ಅವರು ಎಲ್ಲಾ ಮಂಜೂರಾತಿ ಪತ್ರಗಳನ್ನು ಕೊಡುತ್ತಾರೆ. High Court ನಲ್ಲಿ ಇವತ್ತು highest cases ಇರುವುದು proxy made out their records. Land Tribunals ಮುಂದೆ ಇವತ್ತು ತೀರ್ಮಾನ ಆಗಬೇಕಾದಂತಹ casesಗಳು Bangalore (East) (South) (North) ನಲ್ಲಿಯ ಭೂಮಿಗೆ ಸಂಬಂಧಪಟ್ಟಿದ್ದು ಆಗಿವೆ. ವಿಶೇಷವಾಗಿ ಹೊಸಕೋಟೆ ಭಾಗಕ್ಕೆ ಸೇರಿದಂತಹ ಬಿದರಹಳ್ಳಿ ಹೋಬಳಿ, ಆನೇಕಲ್ ತಾಲ್ಲೂಕು, ಈ ಭಾಗಗಳಲ್ಲಿ ನೀವೇನಾದರೂ ಇವತ್ತು ನಿಮ್ಮ Revenue Officers ಗಳನ್ನು ಕರೆದು ಕೇಳಿದರೆ ಗೊತ್ತಾಗುತ್ತದೆ. ಅಲ್ಲಿ ಸಾಯುವವರೆಲ್ಲಾ ಏತಕ್ಕೆ ಸಾಯುತ್ತಿದ್ದಾರೆ ಎಂದರೆ, ಭೂಮಿಗಾಗಿ ಸಾಯುತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, the worst part of the story ಏನೆಂದರೆ, ಒಬ್ಬ ವ್ಯಕ್ತಿ, ಈ ಸದನದಲ್ಲಿ ಹೇಳುವುದಿಲ್ಲ, ಆಸ್ತಿಗಾಗಿ ತಾಯಿ-ತಂದೆಯನ್ನು ಕೊಂದ. ತದನಂತರ ಐದು ವರ್ಷವಾದ ಮೇಲೆ ತನ್ನ ಹೆಂಡತಿಯನ್ನೇ ಕೊಂದ. ಇತ್ತೀಚೆಗೆ ನಡೆದ 14 murderಗಳಲ್ಲಿ ಅದೂ ಒಂದು murder. Murder ಆಗುತ್ತಿರುವುದು ಬೇರೆ ಇನ್ನೇನಕ್ಕೂ ಅಲ್ಲ. ಚಿನ್ನ ಬೇಕೆಂದೇನೂ ಅಲ್ಲ ಅಥವಾ ನನ್ನನ್ನು Graduate ಮಾಡಲಿಲ್ಲ ಎಂದಲ್ಲ, ಅಮೆರಿಕಾಕ್ಕೆ ಕಳುಹಿಸಲಿಲ್ಲ ಎಂದಲ್ಲ, ನನಗೆ ಬಸ್ಸು ಕೊಡಿಸಲಿಲ್ಲ ಎಂದಲ್ಲ; ಒಳ್ಳೆಯ ಕಾರು ಕೊಡಿಸಲಿಲ್ಲ ಎಂದಲ್ಲ, ಭೂಮಿಗಾಗಿ. ಆದ್ದರಿಂದ ಇವತ್ತು ಈ major cities in Karnataka ಏನಿವೆ, ಎಲ್ಲಾ ಕಡೆ ಇದು ನಡೆಯುತ್ತಿದೆ. It needs a detailed discussion. Then we can take up in the interest of poor people.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಖರ್ಗೆಯವರು ಹೇಳಿದ್ದಕ್ಕೆ ನಾನೂ ಸಹಮತ ವ್ಯಕ್ತಪಡಿಸುತ್ತೇನೆ. ಯಾರೋ ಒಬ್ಬ ದಲಿತನಿಗೋ, ಬಡವನಿಗೋ ಒಳ್ಳೆಯದಾಗಲಿ ಎಂದು ಹೇಳುವಂತಹ ಕಾನೂನನ್ನು, ರಂಗೋಲಿ ಅಡಿ ನುಸಿಯುವಂತಹವರು ತುಂಬಾ ಜನರಿದ್ದಾರೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಇದರಲ್ಲಿ ಈ Municipality Area ದಿಂದ 3 ಕಿ.ಮೀ. ಒಳಗಡೆ ನಮಗೆ ಮಂಜೂರು ಮಾಡಲಿಕ್ಕೆ ಬರುವುದಿಲ್ಲ. MUDA area ಎಂದು fix

ಆದರೆ, ಅದನ್ನೂ ಕೂಡ ಈ Act ಅಡಿಯಲ್ಲಿ ಮಂಜೂರು ಮಾಡಲಿಕ್ಕೆ ಬರುವುದಿಲ್ಲ. ಹೀಗಾಗಿ ಮಾನ್ಯ ಕೃಷ್ಣಪ್ಪನವರು ಹೇಳಿದಂಥದ್ದು ಇದಕ್ಕೆ ಲಾಗೂ ಆಗಲಿಕ್ಕಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಆ ಕಾಲದಲ್ಲಿಯೂ ಕೂಡ Corporation Area ನಿಂದ 5 ಕಿ.ಮೀ. Municipality ಯಿಂದ 2 ಕಿ.ಮೀ. Town Panchayath ನಿಂದ ಒಂದು ಕಿ.ಮೀ. ಎಂದು limit ಹಾಕಿದ್ದರು. ಈಗ ಎಲ್ಲಾ ಕಡೆಯೂ extension ಆಗಿದೆ. ನಿಮಗೆ ಗೊತ್ತಿದ್ದಂತೆ, ಈಗ ಬೆಂಗಳೂರನ್ನೇ ತೆಗೆದುಕೊಳ್ಳಿ, ಬೆಂಗಳೂರು ಆಗ 5 ಕಿ.ಮೀ. extension Corporation limit ನಿಂದ ಎಂದು ಇದ್ದರೆ, ಇವತ್ತು 15–20 ಕಿ.ಮೀ. ದೂರ ಹೋದರೂ ಕೂಡ value ಒಂದು ಕೋಟಿ ರೂ.ಗಳವರೆಗೆ ಇದೆ. Exampleಗಾಗಿ ಮಾತ್ರ ನಾನು ಇದನ್ನು ಹೇಳುತ್ತಿದ್ದೇನೆ. ಅದಕ್ಕಾಗಿ ನೀವು ಇಡೀ ರಾಜ್ಯದಲ್ಲಿ survey ಮಾಡಿ. ನಿಮಗೆ ಕೋಟ್ಯಂತರ ರೂ.ಗಳು ಇವತ್ತು ಬೆಲೆ ಬಾಳತಕ್ಕಂಥ ಜಮೀನು fictitious records ತಯಾರು ಮಾಡತಕ್ಕವರ ಕೈಗೆ ಹೋಗುತ್ತದೆ. ಬಡವರಿಗೆ ಹೇಗೆ ಸಹಾಯ ಮಾಡಬಹುದು ಎಂಬುದನ್ನೂ ಸಹ ನೀವು ನೋಡಬೇಕಾಗುತ್ತದೆ. ನಾನು ಅದಕ್ಕೋಸ್ಕರ ಇದನ್ನು ನಿಲ್ಲಿಸಬೇಕೆಂದು ಹೇಳುತ್ತಿಲ್ಲ. But, carefully ಹೋಗಬೇಕು. ಆ area ವನ್ನೂ ಕೂಡ extend ಮಾಡತಕ್ಕಂಥ ಅವಶ್ಯಕತೆಯೂ ಕೂಡ ಬರುತ್ತದೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಸಾರ್, ಈಗ ಒಂದು ವಿಚಾರ. ಹಿಂದೆ ಏಕೆ ಇಷ್ಟು ಅರ್ಜಿಗಳು ಉಳಿಯಿತು ಎಂದರೆ, ನಾನೇ ಈ ಬಗ್ಗೆ ಇಲ್ಲಿ ಐದಾರು ಸಾರಿ ಪ್ರಸ್ತಾಪ ಮಾಡಿದ್ದೇನೆ. Surveyorsಗಳಿಲ್ಲ, RIಗಳಿಲ್ಲ VAಗಳಿಲ್ಲ. 5–6 Circle ಗಳಿಗೆ ನಮ್ಮ ಹಳ್ಳಿಗಳಲ್ಲೆಲ್ಲಾ ಒಬ್ಬೊಬ್ಬ VA ಇದ್ದಾನೆ. ಇದರಿಂದಾಗಿ Record ಗಳೇ ಆಗುವುದಿಲ್ಲ. ನಾವು ವಾರಕ್ಕೊಮ್ಮೆ ಮೀಟಿಂಗ್ ಕರೆಯುತ್ತೇವೆ. ನಮ್ಮ ಎದುರುಗಡೆ records ಬರುವುದಿಲ್ಲ. ನಮ್ಮ ಪಶ್ಚಿಮಘಟ್ಟದ areaಗಳಲ್ಲಿ ಹಳ್ಳಿಗಳಲ್ಲಿ ಎಲ್ಲೆಲ್ಲೋ ಮೂಲೆಗಳಲ್ಲಿ ದಲಿತರು, ಸಾಮಾನ್ಯ ಬಡವರು ಬಗರ್‌ಹುಕಂ ಮಾಡಿಕೊಂಡಿದ್ದಾರೆ. ಅವರಿಗೆ ಮಂಜೂರಾತಿ ಮಾಡಿಕೊಡೋಣ ಎಂದರೆ records ಬಾರದೆ ಲೇಟಾಗುತ್ತಿದೆ. ಅಷ್ಟರೊಳಗಾಗಿ ಅವಧಿ ಹೋಯಿತು. ಇನ್ನೊಂದು ಏನಾಗಿದೆ ಎಂದರೆ, ಎರಡು ವರ್ಷದಿಂದ, ಹಿಂದಿನ ಸರ್ಕಾರ ಇದ್ದಾಗ ಕೂಡ, ಆ Committeeಗಳು ಆಗದಿರುವುದರಿಂದ ತೊಂದರೆಯಾಯಿತು. ಸೊರಬದಲ್ಲಿ ಹಿರೇಶಕುನ ಎಂಬ ಹಳ್ಳಿಯ dispute ಇರುವಂತಹ ಒಂದು ಕೇಸ್‌ನಲ್ಲಿ ಗೋಮಾಳ ಲ್ಯಾಂಡ್ ಅನ್ನು ಮಂಜೂರು ಮಾಡಬಾರದು ಎಂಬುದನ್ನು ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಹೈಕೋರ್ಟ್ ಒಂದು ತೀರ್ಮಾನ ಕೊಟ್ಟಿತು. ಇದರ

ಪರಿಣಾಮವನ್ನು ನಾವು ಇವತ್ತು ಅನುಭವಿಸುತ್ತಿದ್ದೇವೆ. ನನ್ನ ಒಂದು ತಾಲ್ಲೂಕಿನಲ್ಲಿ 6500 ಅರ್ಜಿಗಳು ಗೋಮಾಳಕ್ಕೆ ಸೇರಿದಂತಹವು ಇವೆ. ಇವತ್ತು ಅವರನ್ನು ಬಿಡಿಸುವಂತಿಲ್ಲ. ಎಲ್ಲಾ ದಲಿತರು ಮತ್ತು ಬಡವರು ಸಾಗುವಳಿ ಮಾಡುತ್ತಿದ್ದಾರೆ. ಹಾಗಾಗಿ ಇವತ್ತು ಅದನ್ನೂ ಕೂಡ ಸರಿ ಮಾಡಬೇಕು. Appeal ಹಾಕಬೇಕು, ಅವಕಾಶ ಮಾಡಿಕೊಡಬೇಕು. ಎಲ್ಲಿ ಶ್ರೀಮಂತರು ಮತ್ತು ಉಳ್ಳವರು ಉಳುತ್ತಿದ್ದಾರೋ, ಅವರನ್ನು ಕೈಬಿಡಿಸಬೇಕು. ಏಕೆಂದರೆ, ಸುಳ್ಳು ದಾಖಲಾತಿ ಸೃಷ್ಟಿ ಮಾಡಿ ಏನು ಬೇಕಾದರೂ ಮಾಡಲಿಕ್ಕೆ ತಯಾರಿದ್ದಾರೆ. ನಮ್ಮಂತಹ ಅನೇಕ ಜನ ಶಾಸಕರುಗಳು ಇದ್ದೇವೆ. ನಮಗೆ commitment ಇದೆ. ಅಲ್ಲಿ ಬಡವರು ಮತ್ತು ದಲಿತರನ್ನು ಕಂಡು ಸಹಾಯ ಮಾಡುವ ಮನಸ್ಸಿದೆ. ಯಾರೋ ಶ್ರೀಮಂತ familyಯವರು ಉದ್ದೇಶಪೂರ್ವಕವಾಗಿ divide ಮಾಡಿಕೊಂಡು ಅಲ್ಲಿ ಬಂದಿದ್ದಾರೆ ಎಂದರೆ, ಅದನ್ನು ನಾವು reject ಮಾಡಲಿಕ್ಕೂ ಕೂಡ ಬರುತ್ತದೆ. ಅವರು ಬೇಕಾದರೆ ಕೋರ್ಟ್‌ಗೆ ಹೋಗಲಿ. ಆದರೆ ನಿಜವಾಗಿಯೂ ಯಾವ ಬಡವರಿಗೆ ಸಿಗಬೇಕೋ ಅವರಿಗೆ ಇದು ದೊರಕಬೇಕಾಗುತ್ತದೆ. ಇದರ ಅವಧಿಯನ್ನು extend ಮಾಡಿ ಕೊಡಬೇಕು. ಇದರ ಜೊತೆಗೆ RI ಗಳನ್ನು, VA ಗಳನ್ನು ನೇಮಕಾತಿ ಮಾಡಿಕೊಳ್ಳಿ, ಇಲ್ಲವೆಂದರೆ ಏನಾದರೂ ಒಂದು ವ್ಯವಸ್ಥೆ ಮಾಡಿ. ಅಲ್ಲಿ ತಾಲ್ಲೂಕ ಆಫೀಸ್‌ಗಳಲ್ಲಿ ಕೆಲಸ ಮಾಡುವವರು ಇಲ್ಲದಿದ್ದರೆ, filed level ನಲ್ಲಿ RI ಗಳು ಮತ್ತು VAಗಳು ಇಲ್ಲದಿದ್ದರೆ ಕೆಲಸ ಮಾಡಲಿಕ್ಕೆ ಕಷ್ಟವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ, Diabetic patients ಬಹಳ ಜನ ಒತ್ತಾಯಿಸುತ್ತಿದ್ದಾರೆ. ಮಾಡಿದ ಅಡುಗೆಯೆಲ್ಲಾ ಆರಿ ಹೋಗುತ್ತಿದೆ. ಆಮೇಲೆ ಚರ್ಚೆ ಮಾಡೋಣ, study ಮಾಡೋಣ....

ಶ್ರೀ ಆರಗ ಜ್ಞಾನೇಂದ್ರ: ಆದ್ದರಿಂದ ದಯವಿಟ್ಟು ಇದನ್ನು pass ಮಾಡಿಸಬೇಕೆಂದು ನನ್ನ ವಿನಂತಿ.

ಶ್ರೀ ಎ. ಸೋಮಣ್ಣ (ಬಿನ್ನಿಪೇಟೆ): ಮಾನ್ಯ ಉಪಾಧ್ಯಕ್ಷರೆ, ತಾವೇನು ಬಿಲ್ ತಂದಿದ್ದೀರಿ, ಅದರ ಬಗ್ಗೆ ದಯಮಾಡಿ ಒಂದು ವಿಚಾರವನ್ನು ಹೇಳಬಯಸುತ್ತೇನೆ. ನಮ್ಮ ನಾಯಕರಾದ ಖರ್ಗೆ ಸಾಹೇಬರು ಹೇಳಿದ ಹಾಗೆ, ನಮ್ಮ urban area ದಲ್ಲಿ ಸಾಕಷ್ಟು ಗೊಂದಲ ಇದೆ. ನನ್ನ ಕ್ಷೇತ್ರದೊಳಗೆ ಅರೆಕೆಂಪನಹಳ್ಳಿ ಎಂಬಲ್ಲಿ ಯಾರೋ ಬೋವಿಗಳ 50 ಎಕರೆ ಜಮೀನು ಇತ್ತು. ಇವತ್ತಿನವರೆಗೂ ಕೂಡ ಆ ಬೋವಿಗಳು ಒಂದು ಸಣ್ಣ ಮನೆಯಲ್ಲಿ ಕೂಲಿ ಮಾಡುವುದು ತಪ್ಪಿಲ್ಲ. ಬೋವಿಗಳ ಹೆಸರಿನಲ್ಲಿ ಎಲ್ಲಾ ಮಾಡಿ ಬೇರೆ ಯಾರೋ ಕೋಟ್ಯಧಿಪತಿಗಳಾಗಿದ್ದಾರೆ. ನಾನು ಹೈಕೋರ್ಟ್‌ಗೆ

ಹೋಗಿ, ಹೈಕೋರ್ಟ್‌ನಿಂದ ಅದನ್ನು ವಾಪಸ್ ಕಳುಹಿಸಿ, ಏನೆಲ್ಲಾ ಮಾಡಿದರೂ ಕೂಡ ಈ ನಿಮಿಷಕ್ಕೂ ಕೂಡ, ಯಾರು ಅಲ್ಲಿ ಒಬ್ಬ ಉಳ್ಳವನು ಇದ್ದಾನೆ, ಆತ building ಗಳನ್ನು ಕಟ್ಟುತ್ತಲೇ ಇದ್ದಾನೆ, ಸಾಕಷ್ಟು ಆಗಿದೆ. ಮೂರೂವರೆ ಎಕರೆ ಜಾಗ ಉಳಿಸುವುದಕ್ಕೆ ಏನೆಲ್ಲಾ ಪ್ರಯತ್ನ ಮಾಡಿದರೂ ಆಗಲಿಲ್ಲ. ಇನ್ನೊಂದು ಅವಲಹಳ್ಳಿಯಲ್ಲಿ 26 ಎಕರೆ ಜಮೀನು ಇದೆ. ನಾನು 14 ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇನೆ. ಸರ್ಕಾರಿ ಜಮೀನು ಎಂದು ಇದ್ದರೂ ಕೂಡ, ಎಲ್ಲೋ ಒಂದು ಕಡೆ ನಮ್ಮ ಅಧಿಕಾರಿಗಳು ಆ Revenue Inspector ಮತ್ತು ಆ Tahasildar ಸೇರಿಕೊಂಡು ಅದಕ್ಕೆ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದಾರೆ. Original ಹೋಗಿ ನೋಡಬೇಕೆಂದರೆ Special DC Office ನಲ್ಲಾಗಲಿ, Deputy Commissioner Office ನಲ್ಲಾಗಲಿ Divisional Commissioner Office ನಲ್ಲಾಗಲಿ ಅದರ ಬಗ್ಗೆ ಏನೇನೂ ದಾಖಲೆಗಳು ಇರುವುದಿಲ್ಲ. ಆದರೆ ಅದು land grant committee ಮುಂದೆ ಮಾತ್ರ ಬರುತ್ತಿರುತ್ತದೆ. ಇನ್ನು ಟ್ಯಾಂಕ್‌ಗಳ ಬಗ್ಗೆ ಹೇಳುವುದಾದರೆ, ವಿಶೇಷವಾಗಿ ಬೆಂಗಳೂರು ನಗರದಲ್ಲಿ ಎಷ್ಟು ಕೆರೆಗಳಿದ್ದವೋ, ಅವುಗಳೆಲ್ಲದರಲ್ಲಿಯೂ ಕೂಡ ಸಾಗುವಳಿ ಚೀಟಿಗಳನ್ನು issue ಮಾಡಲಾಗಿದೆ ಎಂದು ಮಾನ್ಯ ಜಗದೀಶ್ ಶೆಟ್ಟರ್‌ರವರ ಗಮನಕ್ಕೆ ತರಬಯಸುತ್ತೇನೆ. ದಯವಿಟ್ಟು ಇಂತಹವನೆಲ್ಲಾ ಮಾಡುವಾಗ ಹುಷಾರಾಗಿರಬೇಕು. ಹೇಗಿದ್ದರೂ ನಾವು encroachment ಬಗ್ಗೆ ನೋಡಲು committee ಯೊಂದನ್ನು ಮಾಡಿದ್ದೇವೆ. ಬಹಳ ಒಳ್ಳೆಯವರನ್ನು ಅಲ್ಲಿಗೆ ಹಾಕಿದ್ದಾರೆ. ಇಂತಹದ್ದಕ್ಕೆ ಬೆಂಗಳೂರು ನಗರದಲ್ಲಿ High Court ನಿಂದ ಇದನ್ನು ತೀರ್ಮಾನ ಮಾಡಿ ಎಂದು directions ಬರುತ್ತದೆ. ಇದನ್ನು Committee ಹೇಗೆ ಮಾಡಲು ಸಾಧ್ಯ? Urban area ಆಗಿರಬಹುದು, ವಿಸ್ತೀರ್ಣ ಆಗಿರಬಹುದು, ಎಲ್ಲವನ್ನೂ ಕೂಡ ತೆಗೆದುಕೊಂಡು ಹೊಡೆಯುತ್ತಿದ್ದಾರೆ. ಆದ್ದರಿಂದ ದಯಮಾಡಿ ಈ ನಿಯಮಗಳನ್ನು ಮಾಡುವಾಗ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ವಿಶೇಷವಾಗಿ ಇರತಕ್ಕಂಥ ಬಹುತೇಕ ಇಂತಹದ್ದು ಏನಿದೆ, Tankಗಳು ಇರಬಹುದು, ಹಳೆಯ caseಗಳು ಇರಬಹುದು, ಅವುಗಳನ್ನೆಲ್ಲಾ ಮತ್ತೊಂದು ಸಾರಿ ಪರಾಮರ್ಶೆ ಮಾಡದೆ ತಾವೇನಾದರೂ ತೀರ್ಮಾನ ಮಾಡುವುದಾದರೆ, ಕೋಟ್ಯಂತರ ರೂಪಾಯಿಗಳ ಆಸ್ತಿ ಎಲ್ಲೋ ಒಂದು ಕಡೆ ಉಳ್ಳವರ ಪಾಲಾಗುತ್ತದೆ. ಇದನ್ನು ಮಾಡುವಾಗ ಇದರ ಸಾಧ್ಯಾಸಾಧ್ಯತೆಗಳನ್ನು ತಾವು ದಯಮಾಡಿ ಪರಿಶೀಲನೆ ಮಾಡಿ ಇದಕ್ಕೆ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು. ರೂಲ್ಸ್ ಮಾಡುವಾಗ ಇದನ್ನು ತಿದ್ದುಪಡಿ ಮಾಡಿಕೊಂಡು ಮಾಡುವುದರಲ್ಲಿ ತಪ್ಪೇನೂ ಇಲ್ಲವೆಂಬುದು ನನ್ನ ಭಾವನೆಯಾಗಿದೆ.

ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ): ಮಾನ್ಯ ಅಧ್ಯಕ್ಷರೆ, ಇವತ್ತು ಬೆಂಗಳೂರು ನಗರದ ಬಗ್ಗೆ ಇವರು ಹೇಳುತ್ತಿದ್ದಾರೆ. ಆದರೆ ಇವತ್ತು ಬೆಂಗಳೂರು (ಗ್ರಾಮಾಂತರ) ಜಿಲ್ಲೆಯಲ್ಲೂ ಇದೇ ಪರಿಸ್ಥಿತಿ ಮುಂದುವರೆದಿದೆ. ಅದರಲ್ಲೂ ವಿಶೇಷವಾಗಿ ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗುತ್ತಿದೆ. ಈ ವಿಚಾರದಲ್ಲಿ ಇವತ್ತು ಅಲ್ಲಿಯ ಸುತ್ತಮುತ್ತಲ ಪ್ರದೇಶದ ಭೂಮಿಗೆ ಬೆಲೆ ಬಂದಿದೆ. ಇವತ್ತು ಇಲ್ಲಿರತಕ್ಕಂಥವರು ಬಹಳಷ್ಟು ಜನ ಅಲ್ಲಿ ಜಮೀನನ್ನು ತೆಗೆದುಕೊಳ್ಳಲಿಕ್ಕೆ ಹೊರಟಿದ್ದಾರೆ. ನಾನು ಅವರ ಹೆಸರುಗಳನ್ನು ಹೇಳಲಿಕ್ಕೆ ಹೋಗುವುದಿಲ್ಲ. ಅಂತಹವರ ಬಗ್ಗೆ ಬೇಕಾದರೆ ತಾವೊಂದು ಪಟ್ಟಿಯನ್ನೇ ಮಾಡಿ ತರಿಸಿಕೊಳ್ಳಿ. ಇದು ಆಗುವಂತಹ ಸಂದರ್ಭಗಳಲ್ಲಿ ಅನೇಕ ಅವ್ಯವಹಾರಗಳು ಅಲ್ಲಿ ನಡೆಯುತ್ತಿದೆ. ಇವತ್ತು ಈಗ ತಾನೇ ಜಾಮ್‌ದಾರ್‌ರವರಿಗೆ ನಾನು ವಿಷಯವೊಂದನ್ನು ಹೇಳಿ ಬಂದೆ. ನಾನು ಇಲ್ಲಿದ್ದೇನೆ ಎಂದು, ಈಗಾಗಲೇ ಅಲ್ಲಿ 6 ಎಕರೆ ಜಾಗಕ್ಕೆ ಕಾಂಪೌಂಡ್ ಅನ್ನು ಹಾಕಲಿಕ್ಕೆ ಹೊರಟಿದ್ದಾರಂತೆ. ಅದಕ್ಕಾಗಿ ನಾನು ತಕ್ಷಣ ಅದನ್ನು stop ಮಾಡಿಸುವಂತೆ ಸೂಚನೆ ಕೊಡಲು ಕೋರಿದೆ. ಅದನ್ನು verify ಮಾಡೋಣ, ಆ ಜಾಗ ಅವರಿಗೆ ಮಂಜೂರಾಗಿದ್ದರೆ, ಅದನ್ನು ಮಾಡಿಸಿಕೊಡೋಣ ಎಂದು ನಾನು ಅವರಿಗೆ ಹೇಳಿದೆ. ಇವತ್ತು ನಗರದ ವ್ಯಾಪ್ತಿಯಲ್ಲಿ ಕೇವಲ 6 ಕಿ.ಮೀ. ಮಾತ್ರವಲ್ಲ, 6 ಸೆಂ.ಮೀ. ಸಹಿತ ಬಿಡುವುದಿಲ್ಲ. ಆ ರೀತಿಯಲ್ಲಿ ಅವ್ಯವಹಾರಗಳನ್ನು ಮಾಡಲಿಕ್ಕೆ ಹೊರಟಿದ್ದಾರೆ. ಇಂತಹದ್ದಕ್ಕೆ ಕಡಿವಾಣವನ್ನು ಹಾಕಬೇಕು. ಅದರಲ್ಲೂ ವಿಶೇಷವಾಗಿ ನಮ್ಮ ದೇವನಹಳ್ಳಿ ಕ್ಷೇತ್ರದಲ್ಲಿ ಸುಮಾರು ನೂರಾರು ಜನ ಸಾಯುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗುತ್ತಿದೆ. ಅನೇಕರು ಜೈಲಿಗೆ ಹೋಗುತ್ತಿದ್ದಾರೆ. ಮಾನ್ಯ ಮಂತ್ರಿಗಳು ಇದಕ್ಕಾಗಿ ವಿಶೇಷವಾಗಿ ಒಬ್ಬ ತಹಶೀಲ್ದಾರ್‌ರವರನ್ನು ನೇಮಕ ಮಾಡಿಕೊಟ್ಟರೂ ಸರಿ, ಈ ಅವ್ಯವಹಾರಗಳನ್ನೆಲ್ಲಾ ತಡೆಗಟ್ಟುವ ರೀತಿಯಲ್ಲಿ ಕೆಲಸಗಳಾಗಬೇಕು. ಇದೇ ಪರಿಸ್ಥಿತಿ ಹೊಸಕೋಟೆಯಲ್ಲಿದೆ, ಇದೇ ಪರಿಸ್ಥಿತಿ ದೊಡ್ಡಬಳ್ಳಾಪುರದಲ್ಲಿದೆ. ಈ ರೀತಿಯಲ್ಲಿ ನಡೆಯುತ್ತಿರುವುದರಿಂದ ಬಹುಶಃ ಇಂತಹ ಅನಾಹುತಗಳು ಆಗಬಾರದು. ಅದನ್ನು ಅವರು ಬಹಳ ಚೆನ್ನಾಗಿ ಮಾತನಾಡಿದರು. ಮಾನ್ಯ ಖರ್ಗೆಯವರು ಹೇಳಿದ್ದಕ್ಕೆ ನಾನೂ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಸೋಮಣ್ಣನವರು ನಗರದ್ದು ಏನು ಹೇಳಿದರು ಅದೇ ಪರಿಸ್ಥಿತಿ ಇವೊತ್ತು ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿದೆ, ಅಂದರೆ ಇವೊತ್ತು ನಮ್ಮ ಬೆಂಗಳೂರು ಗ್ರಾಮಾಂತರ ಪ್ರದೇಶವನ್ನು ನಗರಕ್ಕೆ ಸೇರಿಸಿಕೊಳ್ಳಬೇಕೆಂದು ನಮ್ಮ ಸರ್ಕಾರ ಏನು ಚಿಂತನೆಯನ್ನು ಮಾಡಿದೆ ಅದು ಸಹಿತ ಇವೊತ್ತು ಆಗುತ್ತಿದೆಯೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ದಯಮಾಡಿ

9.30 ಎ.ಎಂ.

ಮಾನ್ಯ ಮಂತ್ರಿಗಳು ಇದರ ಬಗ್ಗೆಯೂ ಯೋಚನೆ ಮಾಡಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮಂತ್ರಿಗಳಿಗೆ ಒಂದು ಚಿಕ್ಕ ಸಲಹೆಯನ್ನು ಕೊಡುತ್ತೇನೆ. ನಮ್ಮ ರೆವಿನ್ಯೂ ಕಮೀಷನರ್‌ರವರು ಇಲ್ಲಿಯೇ ಇದ್ದಾರೆ. ನಾನು ಏನೂ ಪ್ರಸ್ತಾಪ ಮಾಡುವುದಿಲ್ಲ. ಈ ಕೂಡಲೇ ನಿಮ್ಮ ರೆವಿನ್ಯೂ ಕಮಿಷನರ್ ಕೋಲಾರ್ ಡಿ.ಸಿ.ಯವರಿಗೆ ಆದೇಶ ಕೊಟ್ಟು ಶ್ರೀನಿವಾಸಪುರ ತಾಲ್ಲೂಕಿಗೆ ಸಂಬಂಧಿಸಿದಂತೆ ಇದೇನು ರೆಸಲ್ಯೂಶನ್ ಬುಕ್ಸ್ ಇವೆಯೋ, ಅರ್ಜಿಗಳು ಇವೆ, ದಾಖಲೆಗಳು ಇವೆ. ಶ್ರೀನಿವಾಸಪುರ ಹೊಂದಿಕೊಂಡು ಎಷ್ಟು ಸರ್ಕಾರಿ ಜಾಗ, ಅರಣ್ಯದ ಭೂಮಿ, ಮೈದಾನ ಇರತಕ್ಕಂಥದ್ದು ಪ್ರಬಲಸ್ಥರ ವಶವಾಗಿದೆ ಎಂಬ ಬಗ್ಗೆ ಒಂದು ವರದಿಯನ್ನು ತರಿಸಿಕೊಳ್ಳಿ. ನಾನೇನೂ ಹೇಳುವುದಿಲ್ಲ. ಯಾರು ತರಿಸಿಕೊಂಡರು, ಯಾವಾಗ ಆಯಿತು, ಇತ್ಯಾದಿ ಬಗ್ಗೆ ನಾನೇನೂ ಹೇಳುವುದಕ್ಕೆ ಹೋಗುವುದಿಲ್ಲ. ದಯಮಾಡಿ ನೀವು ಈಗ instructions ಕೊಡಿ, ಮೂರು ದಿವಸದಲ್ಲಿ ವರದಿಯನ್ನು ತರಿಸಿಕೊಳ್ಳಿ. ನಿಮಗೆ ಒಂದು ಅಂದಾಜು ಸಿಗುತ್ತದೆ. ಎಂಥೆಂಥವರು ಇರುತ್ತಾರೆ. ಏನೇನೆಲ್ಲಾ ಅವರು ಮಾಡುತ್ತಾರೆ. ಎಂಬುದು ನಿಮಗೆ ಗೊತ್ತಾಗುತ್ತದೆ. ನಾನು ಯಾರ ಮೇಲೂ ಆರೋಪಣೆಯನ್ನು ಈಗ ಮಾಡುವುದಕ್ಕೆ ಹೋಗುವುದಿಲ್ಲ. Please get the details ತಾವು ಯಾವತ್ತು ಕರೆದರೆ ಒಂದು ವಾರ ಬಿಟ್ಟು, ಇಂತ ದಿವಸ ನನ್ನ ಆಫೀಸಿಗೆ ಬರಬೇಕೆಂದು ತಾವು ನೋಟೀಸ್ ಕೊಟ್ಟರೆ ಆಗ ಅಧಿಕಾರಿಗಳು ಬರಲಿ, ಆಗ ನಾನು ಏನು ಹೇಳಬೇಕೋ ಅವರ ಸಮ್ಮುಖದಲ್ಲಿ ದಾಖಲೆಗಳೆಲ್ಲಾ ನಿಮ್ಮ ಕೈಗೆ ಬಂದಾಗ ನಾನು ಬಂದು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಒಂದು ವಿಧೇಯಕದ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾನ್ಯ ಸದಸ್ಯರುಗಳು ಮಾಡಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಮಾಧುಸ್ವಾಮಿಯವರು ಹಾಗೂ ಇನ್ನಿತರ ಹಲವಾರು ಹಿರಿಯ ಸದಸ್ಯರುಗಳು ಹಲವಾರು ಮಹತ್ವದ ಸಲಹೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಬೆಂಗಳೂರು ನಗರಕ್ಕೆ ಸೀಮಿತವಾಗಿ ಅದರ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೆಗೆದುಕೊಳ್ಳಬೇಕೆನ್ನುವಂಥ ವಿಚಾರವನ್ನು ಇವೊತ್ತು ಅವರುಗಳು ಹೇಳಿದ್ದಾರೆ. ಇದು ನಿಜ. ಇವೊತ್ತು ಬೆಂಗಳೂರು ಸುತ್ತಮುತ್ತ ಇರುವಂಥ ಜಮೀನುಗಳ ಬಗ್ಗೆ ಸಾಕಷ್ಟು ಒಂದು ರೀತಿಯಾದಂಥ ಲಾಬಿಗಳು ನಡೆಯುತ್ತಿರುವುದು ಇವೊತ್ತು ನಮ್ಮ ಗಮನಕ್ಕೆ

ಬಂದಿದ್ದು ಮತ್ತು ಎಲ್ಲರ ಗಮನಕ್ಕೆ ಬಂದಿದ್ದು ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಒಂದು ಕಡೆ ಬಗರ್‌ಹುಕುಂ ಕಮಿಟಿ ಮುಖಾಂತರ ಕೊಡುವ ಅರ್ಜಿಗಳು, ಮತ್ತೊಂದು ಕಡೆ ಸರ್ಕಾರಿ ಜಮೀನುಗಳನ್ನು ಅಲ್ಲಿ ದಾಖಲೆಗಳನ್ನು ತಿದ್ದುಪಡಿ ಮಾಡಿ ತಮ್ಮ ಹೆಸರುಗಳನ್ನು ಹಾಕಿಕೊಳ್ಳುವಂಥದ್ದು ವ್ಯವಸ್ಥೆ ಹಿಂದೆ ನಡೆದಿದೆ, ಈಗಾಗಲೇ ಅದರ ಬಗ್ಗೆ ಸುಮಾರು ನಾಲ್ಕು ಸಾವಿರ ಎಕರೆಗಿಂತಲೂ ಜಾಸ್ತಿ ಸರ್ಕಾರಿ ಜಮೀನುಗಳನ್ನು ಎನ್‌ಕ್ರೋಚ್ ಆಗಿರುವ ಬಗ್ಗೆ ಐಡೆಂಟಿಫೈ ಮಾಡಿ ಅದರಲ್ಲಿ ಎರಡು ಸಾವಿರ ಎಕರೆಗಳಲ್ಲಿದ್ದಂಥ ದಾಖಲೆಗಳನ್ನು ಆ ಪ್ರೈವೇಟ್ ವ್ಯಕ್ತಿಗಳ ಹೆಸರುಗಳನ್ನು ತೆಗೆದುಹಾಕಿ ಆ ಜಮೀನುಗಳೆಲ್ಲವೂ ಸರ್ಕಾರಿ ಜಮೀನುಗಳೇ ಆಗಿವೆ ಎಂದು ದಾಖಲೆಗಳಲ್ಲಿ ತಿದ್ದುಪಡಿ ಮಾಡಿರುವುದು ನಮ್ಮ ಹೊಸ ಸಮ್ಮಿಶ್ರ ಸರ್ಕಾರ ಬಂದ ಮೇಲೆಯೇ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ರೀತಿ ಇನ್ನೂ ಎನ್‌ಕ್ರೋಚ್‌ಮೆಂಟ್ ಆದಂಥ ಲ್ಯಾಂಡ್ಸ್‌ಗಳ ಬಗ್ಗೆ ಈ ಸದನದಲ್ಲಿಯೇ ಈ ಹಿಂದೆಯೇ ಹಲವಾರು ಸಂದರ್ಭದಲ್ಲಿ ನಾನು ಗಮನಕ್ಕೆ ತೆಗೆದುಕೊಂಡು ಬಂದಿದ್ದೇನೆ. ಹೀಗಾಗಿ ಒಂದು ಕಡೆ ಆ ರೀತಿಯಾಗಿ ಸರ್ಕಾರಿ ಜಮೀನುಗಳ ಎನ್‌ಕ್ರೋಚ್‌ಮೆಂಟ್ ನಡೆದಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಜಗದೀಶ್ ಶೆಟ್ಟರೇ, ಒಂದ್ನಿಮಿಷ, ಈ ರೀತಿಯ ಕೆಲಸವನ್ನು ಮಾಡುತ್ತಾರಲ್ಲಾ, ಅವರುಗಳು ಅಂದಾಜು ಯಾವ ರೀತಿಯಲ್ಲಿರುತ್ತಾರೆ ಎಂಬ ಬಗ್ಗೆ ನಿಮ್ಮ ಕಲ್ಪನೆ ಇದೆಯೇ? ಕಾಂಗ್ರೆಸ್, ಬಿ.ಜೆ.ಪಿ. ಜನತಾದಳ, ಈ ಪಕ್ಷದ ಯಾವ ಯಾವುದೋ ವಿಂಗ್‌ಗಳು, ಆ ವಿಂಗ್, ಈ ವಿಂಗ್, ಯಾವುದೋ ಸಂಘಟನಾ ಕಾರ್ಯದರ್ಶಿ, ಕಾರ್ಯದರ್ಶಿ; ಸಂಜೆವಾಣಿ, ಈ ಸಂಜೆ, ಅದರ ತುಂಬಾ ಅವರುಗಳದ್ದೇ ಕಟೌಟ್‌ಗಳು, ಅವರದ್ದೇ ಎಲ್ಲಾ ಫೋಟೋಗಳು, ಅವರುಗಳು ಇನ್ನೇನು ಮಾಡುತ್ತಾರೆಂದರೆ ನಿಮ್ಮ ಬರ್ತಡೇ ದಿನದಂದು ಒಂದು caption ಕೊಟ್ಟು ನಿಮ್ಮ ಫೋಟೋ ಪಕ್ಕದಲ್ಲಿ ಅವನದೊಂದು ಫೋಟೋ, ಇಂಥವನ್ನೆಲ್ಲಾ ತೆಗೆಸಿ, ಒಂದಷ್ಟು ಪೇಪರ್ಸ್‌ಗಳನ್ನೆಲ್ಲಾ ತೆಗಿಸಿ ನೋಡಿ. ಈ ರೀತಿ ಕಟೌಟ್‌ಗಳನ್ನು ಹಾಕುವವರು, ಫೋಟೋಗಳನ್ನು ಹಾಕಿಕೊಳ್ಳುವವರು, ಇಂಥವರು ಯಾರ್‍ಯಾರು ಇದ್ದಾರೆ ಅವರುಗಳನ್ನು ಕರೆಸಿ ಪೋಲೀಸ್ ಆಫೀಸರ್‌ರವರನ್ನೂ ಆ ಸಂದರ್ಭದಲ್ಲಿ ಕರೆಸಿಕೊಂಡರೆ ಸ್ವಲ್ಪ ಹೆಚ್ಚು ಕಡಿಮೆ ಎಂಭತ್ತು ಪರ್ಸೆಂಟ್ ಕಳ್ಳರೆಲ್ಲಾ ಸಿಕ್ಕಿಹಾಕಿಕೊಳ್ಳುತ್ತಾರೆ, ನಿಜವಾಗಿಯೂ ಅವರು ಯಾವ ಪಾರ್ಟಿಯವರೂ ಆಗಿರುವುದಿಲ್ಲ. ಅವರು ಕಾಂಗ್ರೆಸ್ಸೂ ಅಲ್ಲ, ಬಿ.ಜೆ.ಪಿ.ಯೂ ಅಲ್ಲ, ಜನತಾ ದಳದವರೂ ಅಲ್ಲ, ಯಾವ ಪಕ್ಷ ಚಲಾವಣೆಯಲ್ಲಿ ಇರುತ್ತದೆಯೋ ಅದರ ಕಟೌಟ್‌ಗೆ ಅವರುಗಳು ಬಂದುಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಕಟೌಟ್‌ನಲ್ಲಿ ಫೋಟೋ ಹಾಕಿಸಿಕೊಂಡಿರುವವನ ಫೋಟೋ ಪೊಲೀಸ್ ಸ್ಟೇಶನ್‌ನಲ್ಲಿರುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಹೌದು. ಅಲ್ಲೂ ಕೆಲವರದ್ದು ಇರುತ್ತದೆ. ಸುಮಾರು ಜನ, ಈಗ ಉದಾಹರಣೆಗೆ ನಾನು ಹೇಳುತ್ತೇನೆ,

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು): ಕಂದಾಯ ಸಚಿವರದ್ದೂ ಹಾಕಿಕೊಳ್ಳುತ್ತಾರೆ, ಹಾಗೆಯೇ ಬೇರೆ ಬೇರೆಯವರದ್ದನ್ನೂ ಹಾಕಿಕೊಳ್ಳುತ್ತಾರೆ, ಕಂದಾಯ ಸಚಿವರೊಬ್ಬರದ್ದೇ ಎಂದೇನೂ ಇಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾನು ಅದನ್ನೇ ಹೇಳುತ್ತಿರುವುದು. ಕಂದಾಯ ಸಚಿವರೆ, ಉದಾಹರಣೆಗೆ ನಿಮಗೆ 58 ವರ್ಷವೋ, 60 ವರ್ಷವೋ ಆಗುತ್ತದೆ ಎಂದಿಟ್ಟುಕೊಳ್ಳಿ. ನಿಮ್ಮದು ಒಂದಷ್ಟು adjectives ಹಾಕಿಬಿಟ್ಟು ನಿಮ್ಮದು ಒಂದು ಫೋಟೋ ಹಾಕಿ ಅದರ ಪಕ್ಕದಲ್ಲಿ ಅವನ ಫೋಟೋ ಹಾಕಿಸಿಕೊಂಡಿರುತ್ತಾನೆ. ಅವನ್ನೇನು ಯಾರೋ, ಏನೋ, ನಿಮಗೆ ಅವನ ಬಗ್ಗೆ ಏನೂ ಗೊತ್ತೇ ಇರುವುದಿಲ್ಲ. ಕಾನೂನಿನಲ್ಲಿ ನಿಷೇಧ ಇಲ್ಲ, ನೀವು ಆ ಬಗ್ಗೆ ನೋಡುವುದಕ್ಕೆ ನಿಮಗೆ ಟೈಂ ಇರುವುದಿಲ್ಲ, ಅದನ್ನೇ ಇಟ್ಟುಕೊಂಡು ಹೆದರಿಸಿಕೊಂಡು ಓಡಾಡಿಬಿಡುತ್ತಾನೆ ಆಫೀಸ್‌ಗಳಲ್ಲಿ. ನಮ್ಮ ರಾಜಕೀಯ ಪಕ್ಷಗಳು ಯಾವ ಯಾವುದಿದ್ದಾವೆ, ನಾವಿಷ್ಟು ಧಾರಾಳವಾಗಿದ್ದೇವೆ, ಬರೋವರದ್ದು ಹೋಗುವವರದ್ದನ್ನು ಲೆಕ್ಕವೇ ಇಟ್ಟಿಲ್ಲ ಯಾವ ಪಾರ್ಟಿಯವರೂ ಕೂಡ. ವಿಶೇಷ ಎಂದರೆ ನೀವು ಹುಟ್ಟಿದ ದಿವಸ ಯಾವುದೆಂದು ನಿಮಗಿಂತಲೂ ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಇಂಥವರು ಬಹಳ ಜನ ಇದ್ದಾರೆ. ಇವರೇ ಇಂಥ ಕೆಲಸಗಳನ್ನೆಲ್ಲಾ ಮಾಡುವುದು. ಆಮೇಲೆ ಅವರ ಅವತಾರಗಳನ್ನು ನೀವು ನೋಡಬೇಕು, ಆ ಸೆಲ್‌ಫೋನ್, ಇಲ್ಲಿಯವರೆಗೆ ಕಟ್ಟು, ಚೈನ್‌ಗಳು, ಬ್ರೈಸ್‌ಲೆಟ್, ಬಟನ್‌ಗಳನ್ನೆಲ್ಲಾ ಬಿಚ್ಚುಬಿಟ್ಟಿರುತ್ತಾರೆ, ಅವರು ಹಾಕುವ ಖಾದಿ ಗರಿ ಗರಿ ಗರಿಯಾಗಿರುತ್ತದೆ, ನಾವ್ಯಾರೂ ಅಂಥದ್ದನ್ನು ಹಾಕುವುದಕ್ಕೆ ಸಾಧ್ಯವಾಗಿರುವುದಿಲ್ಲ, ಆ ರೀತಿ ಅವರು ಹಾಕಿರುತ್ತಾರೆ. ಅಷ್ಟು ನೀಟಾಗಿರುತ್ತಾರೆ. ನೋಡಿ ಅಂಥವರನ್ನು ಹಿಡಿಯುವುದಕ್ಕೆ ನೀವೊಂದು ಹೊಸ ಪ್ರಯತ್ನವನ್ನು ಮಾಡಿ. ಆಮೇಲೆ ನೀವು ಪ್ರೆಸ್‌ಮೀಟ್ ಮಾಡಿ ಅನೌನ್ಸ್ ಮಾಡಿಸಬೇಕು. ಕಾಂಗ್ರೆಸ್ ಪಕ್ಷದ ಹೆಸರಿನಲ್ಲಿ ಬಂದಂಥ ಜನರು ಇಷ್ಟು ಜನ, ಬಿ.ಜೆ.ಪಿ. ಹೆಸರಿನಲ್ಲಿ ಬಂದಿದಂಥ ಕಳ್ಳರು ಇಷ್ಟು ಜನ, ದಳದ ಹೆಸರಿನಲ್ಲಿ ಬಂದಂಥ ಕಳ್ಳರು ಇಷ್ಟು ಜನ ಎಂದು ನೀವು ಪಾರ್ಟಿವಾರು ಕೊಡಬೇಕು. ಆಗ ಇದರಿಂದ ರಾಜಕೀಯ ಪಕ್ಷಗಳವರೂ ಕೂಡ ಎಚ್ಚೆತ್ತುಕೊಳ್ಳಲಿ. ಅವರೂ ಕೂಡ ಎಚ್ಚೆತ್ತುಕೊಳ್ಳಲಿ, ಅವರೂ ಬಂದೋಬಸ್ತ್ ಮಾಡಿಕೊಳ್ಳಲಿ. ಪಾಪ, ಸಾರ್ವಜನಿಕರಿಗೆ

ಏನು ಗೊತ್ತಾಗುತ್ತದೆ, ಪಾಪ ಅವರಿಗೆ ಈ ಒಳ ಅಂತರ್ಯಗಳೆಲ್ಲಾ ಗೊತ್ತಾಗುವುದಿಲ್ಲ, ಅವರು ಏನು ತಿಳಿದುಕೊಳ್ಳುತ್ತಾರೆಂದರೆ ಇವರುಗಳೆಲ್ಲರೂ ಹೀಗೆಯೇ ಎಂದು ನಮ್ಮ ಬಗ್ಗೆ ತಿಳಿದುಕೊಳ್ಳುತ್ತಾರೆ ಪ್ರಕಾಶ್ ಸಾಹೇಬರೇ ಬೇಕಾದರೆ ನಾನು ನಿಮಗೆ ಒಂದಷ್ಟು ದಿವಸ ಸಹಾಯ ಮಾಡುತ್ತೇನೆ, ನನಗೆ ನೀವೇನೂ ಸಂಬಳ-ಗಿಂಬಳ ಕೊಡಬೇಡಿ. ನಾನೇನೂ ಬೇರೆ ಇನ್‌ಫ್ಲಾಯೆನ್ಸ್‌ಗೆ ನಿಮ್ಮ ಹತ್ತಿರ ಬರುವುದಿಲ್ಲ. ಇದರಲ್ಲಿ ಪಕ್ಷಭೇದ ಮಾಡುವುದಿಲ್ಲ. ಎಲ್ಲಾ ಪಕ್ಷಗಳಲ್ಲಿರತಕ್ಕಂಥ ಕಳ್ಳರ ಪಟ್ಟಿಯನ್ನು ಬೇಕಾದರೆ ನಾನು ನಿಮಗೆ ಕೊಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ತಾವು ಹೇಳುವುದು ಅಕ್ಷರಶಃ ನಿಜ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಿಮಗೆ ನಮಗೆ ಗೊತ್ತಿರುವಂಥ ಒಬ್ಬ ಮನುಷ್ಯ ನಿಮ್ಮ ಪಕ್ಷದಲ್ಲಿ ಬಹಳ ಪ್ರಮುಖ ಸ್ಥಾನವನ್ನು ಹೊಂದಿದ್ದಾರೆ. ಆತನ ರಿಯಲ್ ಎಸ್ಟೇಟ್ ಬಿಸಿನೆಸ್ ಎಲ್ಲಾ ನಿಮಗೆ ಗೊತ್ತಿಲ್ಲವೇ? We have known him almost for the last five or ten years. He was nobody ten years ago. He is worth more than Rs.100 crores today. What is your worth today? I know the person. He is nothing less than the rank of Prime Minister. ಎಲ್ಲೋ ಒಂದು ಕಡೆಗೆ why should we become helpless? ಶೆಟ್ಟರ್‌ರವರೆ, ನೀವೇನು ಅಧಿಕಾರ ಬರುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಅಪರೂಪಕ್ಕೆ ಬಂದಿದೆ, ಬಹಳ ಕಾಲ ನೀವು ಅಧಿಕಾರದಲ್ಲಿರಿ, ಒಳ್ಳೆಯ ಕೆಲಸವನ್ನು ಮಾಡಿ, you establish a record.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಚಿವರೆ, ನಿಮ್ಮ ಮುಂದಿನ ಹುಟ್ಟು ಹಬ್ಬದಲ್ಲಾದರೂ ಸ್ವಲ್ಪ ನೋಡಿ, ಯಾರು ಯಾರು ನಿಮ್ಮ ಫೋಟೋವನ್ನು ಹಾಕಿಸಿಕೊಂಡಿರುತ್ತಾರೆ, ಅವರ ಪರಿಸ್ಥಿತಿ ಏನು ಎಂಬುದನ್ನು ನೋಡಿಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಹಾಗೂ ಇನ್ನಿತರ ಹಿರಿಯ ಸದಸ್ಯರುಗಳು ಕೆಲವು ಭಾವನೆಗಳನ್ನೇನು ವ್ಯಕ್ತಪಡಿಸಿದ್ದಾರೆ, ಅದರ ಬಗ್ಗೆ ಮತ್ತೊಂದು ಸಲ ಬಹಳಷ್ಟು ಚರ್ಚೆ ಮಾಡಬೇಕಾಗುತ್ತದೆ. ಏಕೆಂದರೆ ಇದರ ಬಗ್ಗೆ ಕೆಲವೊಂದು ಡೀಟೈಲ್ ಮಾಹಿತಿಗಳು ನನಗೆ ಬಂದಿವೆ. ಆ ಬಗ್ಗೆ ಇನ್‌ವೆಸ್ಟಿಗೇಶನ್ ಮಾಡುತ್ತಿದ್ದಾರೆ. ಸರ್ಕಾರದ ಕಾಗದ ಪತ್ರಗಳು ತಿದ್ದುಪಡಿಯಾದಂಥದ್ದನ್ನು ನಾನೇ ಸ್ವತಃ ನೋಡಿದ್ದೇನೆ. ಅದರ ಬಗ್ಗೆ ಇನ್‌ವೆಸ್ಟಿಗೇಶನ್ ಸ್ಟಾರ್ಟ್ ಆಗಿದೆ. ಅಂಥವುಗಳ ಬಗ್ಗೆ ಈ ಸದನದ ಗಮನಕ್ಕೆ ತೆಗೆದುಕೊಂಡು ಬರುತ್ತೇನೆ. ಯಾವ ಅಧಿಕಾರಿಗಳು ಅದರಲ್ಲಿ

involve ಆಗಿದ್ದಾರೆ, ಯಾರ್ಯಾರು ಇದರಲ್ಲಿ involve ಆಗಿದ್ದಾರೆ, ಅವರ ಮೇಲೆ ಎಲ್ಲಾ ರೀತಿಯಾದಂಥ ಕಾನೂನು ಕ್ರಮಗಳನ್ನು ಕೈಗೊಳ್ಳುವಂಥ ಕೆಲಸವನ್ನು ಈ ಸರ್ಕಾರ ಮಾಡುತ್ತದೆ. ಮತ್ತೆ ಈಗಾಗಲೇ ಒಂದು ಬಿಲ್‌ನ್ನು ತರುವುದಕ್ಕೂ ನಾವು ಈಗಾಗಲೇ ಮೊನ್ನೆ ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ತೆಗೆದುಕೊಂಡಿದ್ದೇವೆ. ಈ ರೀತಿ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡುವಂಥದ್ದು, ದಾಖಲೆಗಳನ್ನು ತಿದ್ದುಪಡಿ ಮಾಡುವಂಥದ್ದು, ಅದರಲ್ಲಿ ಯಾರು ಫಲಾನುಭವಿ ಇದ್ದಾನೋ, ಅಧಿಕಾರಿಗಳು ಯಾರು ಷಾಮೀಲಾಗಿದ್ದಾರೋ ಅವರಿಗೂ ಕೂಡ ಶಿಕ್ಷೆ ಆಗುವಂಥ ರೀತಿಯಲ್ಲಿ ಬಿಲ್‌ನ್ನು ತರುವಂಥದ್ದರ ಬಗ್ಗೆ ಈಗಾಗಲೇ ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಆಗಿದೆ. ಆದಷ್ಟು ಬೇಗನೆ ಅದನ್ನು ತೆಗೆದುಕೊಂಡು ಬರುತ್ತೇವೆ. ಮತ್ತೆ ಇನ್ನೂ ಹಲವಾರು ಪ್ರಕರಣಗಳ ಬಗ್ಗೆ ಇವೊತ್ತು ಇನ್‌ವೆಸ್ಟಿಗೇಶನ್ ನಡೆಯುತ್ತಿದೆ. ಆ ಬಗ್ಗೆ ಹಂತ ಹಂತದಲ್ಲಿ ಗಮನಕ್ಕೆ ತೆಗೆದುಕೊಂಡು ಬರುತ್ತೇನೆ. ಈಗ ಮಾನ್ಯ ರಮೇಶ್‌ಕುಮಾರ್‌ರವರು ಶ್ರೀನಿವಾಸಪುರದ ಬಗ್ಗೆ ಏನು ಹೇಳಿದ್ದಾರೋ ಅದರಲ್ಲಿ ಫಾರೆಸ್ಟ್ ಲ್ಯಾಂಡ್ ಬಗ್ಗೆ ಹೇಳುತ್ತಿದ್ದಾರೆ. ಫಾರೆಸ್ಟ್ ಲ್ಯಾಂಡ್ ಈ ಒಂದು ವಿಚಾರದಲ್ಲಿ ನಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದರೆ ಇವೊತ್ತು ಅವರು ಏನು ಶ್ರೀನಿವಾಸಪುರದ ಲ್ಯಾಂಡ್ ಬಗ್ಗೆ ಹೇಳಿದ್ದಾರೆ, ಆ ಬಗ್ಗೆ ನಮ್ಮ ಕಂದಾಯ ಆಯುಕ್ತರಿಗೆ ಸೂಚನೆಯನ್ನು ಕೊಟ್ಟು ಅದರ ಬಗ್ಗೆ ಒಂದು ವರದಿಯನ್ನು ತರಿಸುವಂಥ ಕೆಲಸವನ್ನು ನಾನು ಮಾಡುತ್ತೇನೆ ಎಂದು ಈ ಸದನದ ಮುಂದೆ ಹೇಳಬಯಸುತ್ತೇನೆ. ಇನ್ನು ಮಾನ್ಯ ಮಾಧುಸ್ವಾಮಿಯವರು ಗೋಮಾಳ ಲ್ಯಾಂಡ್ ಬಗ್ಗೆ ಏನು ಹೇಳಿದ್ದಾರೆ, ಹಿಂದಿನ ವಿಧಾನಸಭೆ ಅಧಿವೇಶನದಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಯಿತು, ಆಗ ನಾನು ಸದನಕ್ಕೆ ಭರವಸೆಯನ್ನು ಕೊಟ್ಟಿದ್ದೆ, ಏನಾದರೂ ಈಗ ಇರತಕ್ಕಂಥ ಕಾನೂನಿಗೆ ತಿದ್ದುಪಡಿಯನ್ನು ತರುವಂಥ ಪ್ರಯತ್ನ ಮಾಡುತ್ತೇನೆ, ಇಲ್ಲದೇ ಹೋದರೆ ರಿಟ್ ಅಪೀಲ್ ಮಾಡುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದೆ. ಆ ರೀತಿಯಲ್ಲಿ ಈವರೆಗೆ ರಿಟ್ ಅಪೀಲ್ ಯಾವಾಗ ಡಿಸೆಂಬರ್ 2005ರಲ್ಲಿ ಏನೊಂದು ಹೈಕೋರ್ಟ್‌ನ ಜಡ್ಜ್‌ಮೆಂಟ್ ಆಯಿತು, ಆ ಜಡ್ಜ್‌ಮೆಂಟ್ ಆದಮೇಲೆ ಇವೊತ್ತು ಗೋಮಾಳ ಲ್ಯಾಂಡ್‌ಗಳನ್ನು ನಾವು ಈ ಒಂದು ಬಗರ್‌ಹುಕುಂ ಮುಖಾಂತರ ಅವರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಇವೊತ್ತೇನು ಹತ್ತು ಲಕ್ಷದಷ್ಟು ಪ್ರಕರಣಗಳಿವೆ, ಅದರಲ್ಲಿ ಬಹಳಷ್ಟು ಪ್ರಕರಣಗಳು ಇವೆ. ಅದರಲ್ಲಿ ಶಿವಮೊಗ್ಗದ್ದಿರಬಹುದು, ಚಿಕ್ಕಮಗಳೂರದ್ದು ಇರಬಹುದು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಈ ಕಡೆಗಳಲ್ಲಿ ಗೋಮಾಳ ಲ್ಯಾಂಡ್‌ಗಳು ಬಹಳಷ್ಟು ಇವೆ. ಈಗ ನಾವು ಅವರುಗಳಿಗೆ ಹಕ್ಕುಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. ಅವರು

ಕಬ್ಜಾದಲ್ಲಿದ್ದಾರೆ. ಅವರು ಕಲ್ಟಿವೇಶನ್ ಮಾಡುತ್ತಿದ್ದಾರೆ. ಈಗ ನಾವು ಅವರಿಗೆ ಏನೂ ಯಾವ ರೀತಿಯ ಹಕ್ಕನ್ನು ಕೊಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಗೋಮಾಳ ಲ್ಯಾಂಡ್‌ನ್ನು ಪರಭಾರೆ ಮಾಡಬಾರದು ಎನ್ನುವಂಥ ತೀರ್ಪು ಇರುವುದರಿಂದ, ಅವರಿಗೆ ಹಕ್ಕನ್ನು ಕೊಡುವುದಕ್ಕೆ ಆಗುತ್ತಿಲ್ಲ. ಈಗಾಗಲೇ ಆ ಬಗ್ಗೆ ಬಹಳಷ್ಟು ವಿಚಾರ ಮಾಡಿಕೊಂಡು ಇವೊತ್ತು ಈಗಾಗಲೇ ಹೈಕೋರ್ಟ್‌ನಲ್ಲಿ ರಿಟ್ ಅಪೀಲ್‌ನ್ನು ನಾವು ಫೈಲ್ ಮಾಡಿದ್ದೇವೆ. ಇನ್ನೊಂದು ಸಂತೋಷ ಏನಪ್ಪಾ ಎಂದರೆ ರಿಟ್ ಅಪೀಲ್ ಅಡ್ಮಿಟ್ ಆಗಿದೆ, ಹಿಯರಿಂಗ್‌ಗಾಗಿ ಅಡ್ಮಿಟ್ ಆಗಿದೆ. ಆದಷ್ಟು ಬೇಗನೆ ಅದನ್ನು ಹಿಯರಿಂಗ್‌ಗೆ ತೆಗೆದುಕೊಂಡು ಬಂದು ಒಂದು ಸರಿಯಾದಂಥ ತೀರ್ಪು ಆಗುವುದಕ್ಕೆ ಎಲ್ಲಾ ರೀತಿಯಾದಂಥ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತದೆ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸಚಿವರ, ಗೋಮಾಳ ಲ್ಯಾಂಡ್ ಬಗ್ಗೆ ಅವರಿಗೆ ಹಕ್ಕು ಕೊಡುವುದಕ್ಕೆ ಬರುವುದಿಲ್ಲವೆಂದು ಮೊದಲಿನಿಂದ ಇದೆ. ಆದರೆ ನಾವು ಬಡವರಿಗೆ ಕೊಡಬೇಕು ಎಂದು ಹೇಳಿದಾಗ reduction of gomala ಎಂದು ಮಾಡಿಕೊಂಡು ಜಿ.ಓ. ಹೊರಡಿಸಿದರೆ, ನಮಗೆ ಕೊಡುವುದಕ್ಕೆ ಅಧಿಕಾರ ಬರುತ್ತದೆ.

ಉದಾಹರಣೆಗಾಗಿ, ಒಂದು ಊರಿನಲ್ಲಿ 100 ಎಕರೆ ಗೋಮಾಳ ಎಂದು ಇರುತ್ತದೆ. ಅಲ್ಲಿ ಜಾನುವಾರು ಸೆನ್ಸಸ್ ಪ್ರಕಾರ ಎಷ್ಟು ಇರಬೇಕೆಂದು ಮಾಡಿದ್ದಾರೆ, ಅದು ರೈಟ್ ಇರಬಹುದು. ನೀವು ಬಡವರಿಗೆ ಕೊಡಬೇಕೆನ್ನುವ ಒಂದು ಕಮಿಟ್‌ಮೆಂಟ್ ಇಟ್ಟುಕೊಂಡರೆ ಅದಕ್ಕೆ ನೀವೇನು ಮಾಡಬೇಕೆಂದರೆ ಅಲ್ಲಿ ನೂರು ಎಕರೆ ಇರುವಂತಹ ಗೋಮಾಳವನ್ನು ರಿಡಕ್ಷನ್ ಮಾಡಿಕೊಂಡು 50 ಎಕರೆನೋ, 70 ಎಕರೆನೋ ನಿಗದಿ ಮಾಡಿ ಉಳಿದಿದ್ದನ್ನು ರೆಗ್ಯುಲರೈಜ್ ಮಾಡುತ್ತೇವೆಂದರೆ ಬರುತ್ತದೆ. ಈಗ ತಾಪತ್ರಯ ಬಂದಿದೆ. ಅದಕ್ಕಾಗಿ ಅಲ್ಲಿ ನೋಡಿಕೊಂಡು ರಿಡಕ್ಷನ್ ಆಫ್ ಗೋಮಾಳ ಕ್ಲಾಜ್‌ನಲ್ಲಿ ಅಥವಾ ರೂಲ್ಸ್‌ನಲ್ಲಿ ತಂದು ಕೊಡತಕ್ಕಂಥ ಕೆಲಸವಾಗಬೇಕು, ಇದು ಒಂದು ವಿಚಾರ. ಇನ್ನು ಎರಡನೆಯದಾಗಿ, ನೀವು ಯಾವ ತಿದ್ದುಪಡಿಗೆ ಹೋಗುತ್ತಿದ್ದೀರಿ ಅದನ್ನು ಹೇಳಬೇಕು. ಒಂದು ಐದು ವರ್ಷ ಎಂದು ತಂದಿದ್ದೀರಿ, ಇನ್ನೊಂದು ಎರಡು ವರ್ಷ ಎಂದು ತಂದಿದ್ದೀರಿ. ನಾನೇಕೆ ಎರಡು ವರ್ಷದ ಬಗ್ಗೆ ಹೇಳುತ್ತಿದ್ದೇನೆ ಎಂದರೆ, ಸೆಕ್ಷನ್ 94(ಎ) ಪ್ರಕಾರ ನಿಮಗೆ ಅಧಿಕಾರವನ್ನು ಸ್ಪಷ್ಟವಾಗಿ ಅದರಲ್ಲಿ ಕೊಟ್ಟಿದ್ದಾರೆ. "Committee or more" – any number of committees you can constitute. .... ಅದಕ್ಕಾಗಿ ನೀವು ಇದನ್ನು

ಎರಡು ವರ್ಷದಲ್ಲಿ ಮುಗಿಸಬೇಕು ಎನ್ನುವಂತಹ ಒಂದು ಪ್ರಯತ್ನ ಮಾಡಿದರೆ, ಕಮಿಟ್‌ಮೆಂಟ್ ಇಟ್ಟುಕೊಂಡರೆ you can constitute more committees and do it. ಇಲ್ಲ ಇದು ಐದು ವರ್ಷವಿರಲಿ, ಆರು ವರ್ಷವಿರಲಿ ಎಂದರೆ ಖಂಡಿತವಾಗಿ ಇದರಿಂದ ತೊಂದರೆ ಜಾಸ್ತಿಯಾಗುತ್ತದೆ ಹೊರಟಾಗಿ ಸಹಾಯವಾಗುವುದಿಲ್ಲ. ಯಾವ ಉದ್ದೇಶಕ್ಕಾಗಿ ನಾವು ಇವತ್ತು ಇದಕ್ಕೆ ಎಕ್ಸ್‌ಟೆನ್‌ಷನ್ ಕೊಡುತ್ತೇವೆ, ಅದೂ ಕೂಡ ಫಲವಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಖರ್ಗೆಯವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಆ ರೀತಿ ಸೂಚನೆ ಕೊಡುವಂಥಾದ್ದು ಮಾಡಬೇಕಾಗಿದೆ. ಏಕೆಂದರೆ ನೂರು ಗೋವುಗಳಿಗೆ 30 ಎಕರೆ ಜಮೀನು ಗೋಮಾಳವೆಂದು ಫಿಕ್ಸ್ ಮಾಡಿದ್ದಾರೆ. ನಿಜವಾಗಿ ಹೇಳಬೇಕಾದರೆ ಇವತ್ತು ಲ್ಯಾಂಡ್ ಎಕ್ಸಸ್ ಇಲ್ಲ. ಹೀಗಾಗಿ ಅದರ ಬಗ್ಗೆ ಯಾವ ರೀತಿ ನಿರ್ಣಯವನ್ನು ಕೈಗೊಳ್ಳಬೇಕು ಹಾಗೂ ಅದರ ಜೊತೆಗೆ ಗೋಮಾಳ ಲ್ಯಾಂಡ್ ಕೂಡ ಉಳಿಯಬೇಕು ಅದರ ವ್ಯವಸ್ಥೆಯಾಗಬೇಕು. ನಾವು ಪೂರ್ತಿ ಗೋಮಾಳ ಲ್ಯಾಂಡ್ ಕೊಟ್ಟುಬಿಟ್ಟರೆ, ನಾಳೆ ದನಕರುಗಳಿಗೆ ಕೂಡ ತೊಂದರೆಯಾಗುತ್ತದೆ. ಅದರ ಬಗ್ಗೆ ಕೂಡ ಗಂಭೀರವಾಗಿ ವಿಚಾರ ಮಾಡಿಕೊಂಡು ಮುಂದಿನ ನಿರ್ಣಯಗಳನ್ನು ಕೈಗೊಳ್ಳುವಂತಹ ಕೆಲಸ ಮಾಡುತ್ತೇವೆ. ಇದು ಎರಡು ವರ್ಷಕ್ಕೆ ಎನ್ನುವಂತಹ ವಿಚಾರ ಇತ್ತು. ಆದರೆ ಇದನ್ನು ಐದು ವರ್ಷ ಎಂದು ಮಾಡಿದರೆ ಪ್ರತಿ ಸಲ ಇದನ್ನು ವಿಸ್ತರಣೆ ಬೇಡವೆಂದು ಉದ್ದೇಶವಿಟ್ಟುಕೊಂಡು ಮಾಡಿದೆ. ಎಲ್ಲರೂ ಕೂಡ ಅದಕ್ಕೆ ಒಪ್ಪಿಗೆ ಕೊಟ್ಟುಬಿಟ್ಟರೆ ಒಳ್ಳೆಯದಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಅದನ್ನು ಒಪ್ಪುವುದಿಲ್ಲ. ಸದುದ್ದೇಶದಿಂದ ನಾವೆಲ್ಲಾ ಇಷ್ಟೆಲ್ಲಾ ಸಲಹೆ ಕೊಟ್ಟು, ಆ ಪ್ರಕಾರ ಮಾಡದಿದ್ದರೆ then, I have to walk out.

ಶ್ರೀ ಬಿ.ಎಸ್. ಯಡಿಯೂರಪ್ಪ: ಆಯಿತು, ಈಗ ಅದು ಯಾವ ರೂಪದಲ್ಲಿ ಇದೆಯೋ ಅದನ್ನೇ ಮಾಡಿಬಿಡೋಣ.

ಶ್ರೀ ಜಗದೀಶ್ ಶೆಟ್ಟರ್: ಆಯಿತು, ಎರಡು ವರ್ಷಕ್ಕೆ ಸೀಮಿತವಾಗಿ ಮಾಡೋಣ. ಮೊದಲು ಯಾವ ರೀತಿ ಬಿಲ್‌ನಲ್ಲಿ ಇತ್ತು, ಅದನ್ನೇ ಮಂಡನೆ ಮಾಡಿದ್ದೇನೆ. ಇದನ್ನು ಪರ್ಯಾಲೋಚನೆ ಮಾಡಿ ದಯವಿಟ್ಟು ಈ ಬಿಲ್ ಅನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.